# ಕನ್ನಡ - I
# KANNADA - I

## ಭಾಗ 2
## Part 2

**ತರಗತಿ**
**STANDARD IX**

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2019

NT-581-1-KANNADA-9(AT) VOL.2

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**Prepared by :**
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@asianetindia.com
Phone : 0471 - 2341883, Fax : 0471 - 2341869
Printed at : KBPS, Kakkanad, Kochi-30

ಪ್ರೀತಿಯ ಮಕ್ಕಳೇ,

ಜ್ಞಾನವೆನ್ನುವುದು ಒಂದು ಸಾಗರ. ಅದು ಆಳವಾದುದು ಮತ್ತು ವಿಸ್ತಾರವಾದುದು. ಅದರಲ್ಲಿ ಮೊಗೆದಷ್ಟು ಮುಗಿಯುವುದಿಲ್ಲ. ಅಲ್ಲಿ ವೈವಿಧ್ಯವಿದೆ. ಬದುಕನ್ನು ಸುಂದರವಾಗಿ ರೂಪಿಸುವುದಕ್ಕೆ ಅಗತ್ಯವಾದ ಪರಿಕರಗಳೆಲ್ಲ ಇವೆ.

ವ್ಯಕ್ತಿಯಿಂದ ವ್ಯಕ್ತಿಗೆ ಬದುಕು ಭಿನ್ನವಾಗಿರುತ್ತದೆ. ಅದನ್ನು ಸ್ವತಃ ತಿಳಿದುಕೊಂಡು ಸ್ವಂತ ನಿರ್ಧಾರಗಳಿಗೆ ರೂಪುನೀಡುವ ಜವಾಬ್ದಾರಿ ಪ್ರತಿಯೊಬ್ಬನಿಗೂ ಇದೆ. ಅಂತಹ ಜವಾಬ್ದಾರಿಯುತವಾದ ಹಾದಿಯಲ್ಲಿ ಸಾಗುತ್ತಿರುವವರು, ಸಾಗಬೇಕಾದವರು ನೀವು. ಆದ್ದರಿಂದಲೇ ಜ್ಞಾನಸಾಗರದ ತೀರದಲ್ಲಿ ನಿಮ್ಮನ್ನು ಅಧ್ಯಾಪಕರು ತಂದು ನಿಲ್ಲಿಸಿದ್ದಾರೆ. ಮುಂದಿನ ಆಯ್ಕೆ ನಿಮ್ಮದು.

ಭಾಷಾಜ್ಞಾನ ಅತ್ಯಗತ್ಯ ಎನ್ನುವ ವಿಚಾರದಲ್ಲಿ ಎರಡು ಮಾತಿಲ್ಲ. ಅದರಲ್ಲಿ ನೈಪುಣ್ಯವನ್ನು ಸಾಧಿಸಿದಷ್ಟೂ ಇತರ ವಿಷಯಗಳ ಕಲಿಕೆಗೆ ಅನುಕೂಲವಾಗುವುದರಲ್ಲಿ ಅನುಮಾನವಿಲ್ಲ.

ವೈವಿಧ್ಯಮಯವಾದ, ಸಂತೋಷದಾಯಕವಾದ ಜ್ಞಾನವನ್ನು ಸ್ವತಃ ನಿರ್ಮಾಣ ಮಾಡಿಕೊಳ್ಳುವತ್ತ ಸಾಗುವುದಕ್ಕೆ ಯೋಗ್ಯವಾದ ಚಟುವಟಿಕೆಗಳನ್ನು ಮಾಡುವುದರ ಮೂಲಕ ಹೊಸಹೊಸ ವಿಚಾರಗಳ ಕಡೆಗೆ ಗಮನಹರಿಸುವುದಕ್ಕೆ ಅನುಕೂಲಕರವಾದ ಪಠ್ಯವಿಷಯಗಳನ್ನೊಳಗೊಂಡ ಕನ್ನಡಭಾಷಾ ಪಠ್ಯಪುಸ್ತಕವನ್ನು ನಿಮ್ಮ ಮುಂದಿಡಲಾಗಿದೆ.

ಭಾಷೆಯ ಮಾಧುರ್ಯವನ್ನು ಆಸ್ವಾದಿಸುತ್ತಾ ಜ್ಞಾನಾರ್ಜನೆ ಮಾಡುತ್ತಾ ಸಾಗಲು ಈ ಪುಸ್ತಕ ನಿಮಗೆ ಉತ್ತಮ ಸಂಗಾತಿಯಾಗಲೆಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ,

**ಡಾ. ಜೆ. ಪ್ರಸಾದ್**

ತಿರುವನಂತಪುರ

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ., ಕೇರಳ

# ಭಾರತದ ಸಂವಿಧಾನ

## ಭಾಗ IV ಕ

## ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಅನುಕ್ರಮಣಿಕೆ


| | | | |
|---|---|---|---|
| ಘಟಕ - 4. ಜೀವನಾದರ್ಶ | | | 87-105 |
| ● ಅಬ್ದುಲ್ ಹಮೀದ | ಕಥನ ಕವನ | ಸುಮತೀಂದ್ರ ನಾಡಿಗ | |
| ● ಜಿ. ಶಂಕರ ಕುರುಪ್ | ಜೀವನ ಚರಿತ್ರೆ | ನಾ.ದಾ. ಶೆಟ್ಟಿ | |
| ● ಬೇಡಿದಂಗೊಲಿದೀವುದೇ ನೃಪಧರ್ಮ | ಕಾವ್ಯ | ಕುಮಾರವ್ಯಾಸ | |
| ಘಟಕ - 5. ಸಮನ್ವಯ | | | 106-123 |
| ● ನಾನೊಂದು ಮರವಾಗಿದ್ದರೆ | ಕವನ | ಮೂಡ್ನಾಕೂಡು ಚಿನ್ನಸ್ವಾಮಿ | |
| ● ಪಯಣ | ಕತೆ | ಮಿರ್ಜಾಬಷೀರ್ | |
| ● ಹರಿಶ್ಚಂದ್ರರಾಯಂ ಸತ್ಯವೆರಸಿ ಬಾಳಲಿ | ಕಾವ್ಯ | ರಾಘವಾಂಕ | |

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ, ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


*ಸಂಪರ್ಕಿಸಬೇಕಾದ ವಿಳಾಸ*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**


'ಶ್ರೀ ಗಣೇಶ್, ಟಿ.ಸಿ. 14/2036, ವಾನ್‌ರೋಸ್ ಜಂಕ್ಷನ್, ತಿರುವನಂತಪುರ – 34

ಫೋನ್ : 0471–2326603

E-mail : childrightscpcr@kerala.gov.in, rtecpcr@kerala.gov.in
website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**
**ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000**

online R.T. E Monitoring: www.nireekshana.org.in



## ಘಟಕ-4

# ಜೀವನಾದರ್ಶ

# ಸರ್ವಜ್ಞನ ವಚನಗಳು

ತನ್ನ ನೋಡಲಿ ಎಂದು ಕನ್ನಡಿಯು ಕರೆವುದೇ
ತನ್ನಲ್ಲಿ ಜ್ಞಾನವುದಿಸಿದ ಮಹಾತ್ಮನು
ಕನ್ನಡಿಯಂತೆ ಸರ್ವಜ್ಞ.

ಹೇಡಿಂಗೆ ಹಿರಿತನವು । ಮೂಢಂಗೆ ಗುರುತನವು ।
ನಾಡ ನೀಚರಿಗೆ ದೊರೆತನವು, ದೊರೆತಿರೆ ।
ನಾಡೆಲ್ಲ ಕೆಡುಗು ಸರ್ವಜ್ಞ ॥



ಮೇಲೆ ಕೊಡಲಾದ ಸರ್ವಜ್ಞನ ವಚನಗಳ ಆಶಯದ ಕುರಿತು ತರಗತಿಯಲ್ಲಿ ಚರ್ಚಿಸಿ ನಿಮ್ಮ ಅನಿಸಿಕೆಗಳನ್ನು ಬರೆಯಿರಿ.



# ಅಬ್ದುಲ್ ಹಮೀದ

- ಸುಮತೀಂದ್ರ ನಾಡಿಗ

ಟ್ಯಾಂಕುಗಿರಿಗಳ ವಜ್ರ ಅಬ್ದುಲ್ ಹಮೀದ
ಭಾರತೀಯರಿಗೆಲ್ಲ ಬಾಯಿಮಾತಾದ
ಲಾಹೋರ ಕ್ಷೇತ್ರದಲ್ಲಭಿಮನ್ಯುವಾದ

ಕೇಳಿರೋ ವೀರರೇ ಅಬ್ದುಲ್ ಹಮೀದ
ವರ್ಷ ಮೂವತ್ಮೂರರೀ ತರುಣಯೋಧ
ಟ್ಯಾಂಕುವ್ಯೂಹವನೊಡೆದು ಜಯಗಳಿಸಹೋದ

ಈ ಕಸೂರ್‌ಕ್ಷೇತ್ರ ಕುರುಕ್ಷೇತ್ರ ಹೋಲೆ
ಸೇರಿದರೊ ಅಮರರು ಆಕಾಶದಲ್ಲೆ
ನೋಡಿದರು ಸೈನ್ಯಗಳ ಕಣ್ಣುಗಳು ಸೋಲೆ

ಹ್ಯಾಂಡ್ ಗ್ರೇನೇಡುಗಳೆಷ್ಟೊ ಅತ್ತಿತ್ತ ಸಿಡಿದು
ಬಾಂಬರುಗಳೊಗೆದಿದ್ದ ಬಾಂಬುಗಳು ಒಡೆದು
ಬೆಂಕಿಮಯವಾಗಿತ್ತು ಬಾನುಬುವಿ ಬಿರಿದು

ಲೆಕ್ಕಿಸಿದನೇ ಎಲ್ಲ ಅಬ್ದುಲ್ ಹಮೀದ
ಮುಂಚೂಣಿ ಮುರಿವುದಕೆ ಸಿಡಿಲಾಗಿ ಹೋದ
ಸಾಟಿಯಿರಲಿಲ್ಲವಗೆ ಇನ್ನೊಬ್ಬ ಯೋಧ

ಢಮ್ ಢಮಾರ್ ಠ್ಠಿಠ್ಠಿಠಿರ್ ಠಿಠಿರೆಂದು ಗನ್ನು
ವೀರ ತೋರಿಸಿಯಾನೆ ರಿಪುಗಳಿಗೆ ಬೆನ್ನು
ಹೊರಟಿದ್ದ ತೆರೆದಂತೆ ಶಿವನ ಹಣೆಗಣ್ಣು

NT-581-2-KANNADA-9(AT) VOL.2

ಮುಂಚೂಣಿ ಮುರಿಯುತ್ತ ಮುನ್ನಡೆದ ಗಂಡು
ತೋಳು ತೊಡೆ ಪಕ್ಕಕ್ಕೆ ತೂರಿದವು ಗುಂಡು
ಅಡಗಿಸಲು ಹೊರಟಿದ್ದ ಪಾಕಿಗಳ ಪುಂಡು

ತಾಗಿದವು ಎರಡುಪಡೆ ಕೈಗೆ ಕೈ ಏರಿ
ಸೈನಿಕರ ಕೈಕಾಲು ಸಿಡಿಮದ್ದು ತೂರಿ
ಮಿದುಳು ಚೆಲ್ಲಾಪಿಲ್ಲಿ ಹ್ಯಾಂಡ್‌ಗ್ರೇನೇಡ್ ಹಾರಿ

ಸತ್ತವರ ಬಿದ್ದವರ ಹಿಂದಿಕ್ಕಿ ನಡೆದ
ಅಡ್ಡಬಂದವರನ್ನು ಗುಂಡಿಕ್ಕಿ ಹೊಡೆದ
ಅಗ್ನಿಪರೀಕ್ಷೆಯಲ್ಲುತ್ತರ ಬರೆದ

ಸೈನಿಕ ವೃಕ್ಷಗಳ ಕಡಿಯುತ್ತ ಧೀರ
ಟ್ಯಾಂಕುಗಿರಿಗಳ ಕೆಡವಿ ಈ ಹವಾಲ್ದಾರ
ರಿಪುವನವ ಸವರಿದ್ದ ಈ ಕಡಿತಕಾರ

ಒಂದು ಟ್ಯಾಂಕಿಗೆ ಹೊಡೆದ ನುಗ್ಗಾಗಿ ಹೋಯ್ತು
ಇನ್ನೊಂದು ಸುಟ್ಟದ್ದು ಧಗಧಗಿಸುತಿತ್ತು
ಬೆಂದ ಸಿಬ್ಬಂದಿಯೋ ಮೃತ್ಯುವಿನ ತುತ್ತು

ಏನಾಗುವುದೊ ಏನೊ ಎಂದಿದ್ದ ತವಕ
ಮರೆಯಾಗಿ ಬಾನವರಿಗಾಗಿತ್ತು ಪುಲಕ
ಸುರಿಸಿದರು ಹೂಮಳೆಯ ಕೈದಣಿಯುವನಕ

ಇವನಿದ್ದರುಳಿವಿಲ್ಲ ಎಂದೆನಿಸಿ ಕೊನೆಗೆ
ಕೆಲವರೊಗ್ಗಟ್ಟಾಗಿ ರಣರಂಗದೊಳಗೆ
ನಡೆಸಿದರು ಟ್ಯಾಂಕೊಂದ ಅಬ್ದುಲ್ಲನೆಡೆಗೆ

ಇಕ್ಕಿದನು ಲೆಕ್ಕಿಸದೆ ಹಣೆಹೊಕ್ಕಗುಂಡು
ಕಣ್ಣತೊಯ್ಯುವ ರಕ್ತ ಕೈಗೊರೆಸಿಕೊಂಡು
ವ್ಹಾರೆವ್ಹಾ ಗುರಿಯಿಟ್ಟು ಹೊಡೆದನೀಗಂಡು

ಅಯ್ಯೋ ಅರೆಮುಚ್ಚಿದವು ಕಣ್ಣು, ಹೆಗಲಲ್ಲಿ
ಗೋಣು ಮುರಿಯುತ್ತಿರಲು, ಬಂದೂಕು ಕೈಯಲ್ಲಿ
ಸಡಿಲುತ್ತಲಿರಲು, ಅಬ್ದುಲ್ಲ ಕೆಡೆದಿದ್ದ ಭೂಮಿಯಲ್ಲಿ

ಸತ್ತನೇ ಅಭಿಮನ್ಯು ಅಬ್ದುಲ್ ಹಮೀದ
ಹೇಗೆ ಸಾಯುವನವನು ಇತಿಹಾಸವಾದ
ರಣರಂಗಪರೀಕ್ಷೆಯಲ್ಲುತ್ತೀರ್ಣನಾದ

ವೀರಮೃತ್ಯುವ ಕೇಳಿ ಉಸ್ಮಾನ್ ಖಲೀಫ
ಸಿಂಹವನು ಹಡೆದ ಮುದಿ ಉಸ್ಮಾನ್ ಖಲೀಫ
ಮೆಚ್ಚಿ ಹೇಳಿದ ಮಗನ ಅಸಮ ಪ್ರತಾಪ


"ಪುತ್ರಸಿಂಹನು ಬಿಟ್ಟ ಟ್ಯಾಂಕುಗಳನಿನ್ನು
ಹರಿದು ಚೆಲ್ಲುವುದಕ್ಕೆ ಮೊಮ್ಮಕ್ಕಳನ್ನು
ಕಳಿಸೋಣವೆಂದಿದ್ದೆ, ಮರಿಗಳವರಿನ್ನು"

ಟ್ಯಾಂಕುಪಡೆ ಭಯಂಕರನು ಅಬ್ದುಲ್ ಹಮೀದ
ಸ್ವಾತಂತ್ರ್ಯದರ್ಚನೆಗೆ ದೇಹವನು ತೇದ
ಲಾಹೋರ ಕ್ಷೇತ್ರದಲ್ಲಭಿಮನ್ಯುವಾದ

ನೆನೆಯಿರಣ್ಣ ಅವನೆಣಿಸಲಿಲ್ಲ ಜಾತಿಮತಭೇದ
ಅವನ ಬದುಕಿನ ಸಿದ್ಧಿ ಸೆಕ್ಯುಲರ್ ವಾದ
ವೀರಕ್ಕೆ ಶೌರ್ಯಕ್ಕೆ ಹೆಸರಾಗಿ ಹೋದ

ವೀರಕಾವ್ಯಕೆ ವಸ್ತು ಅಲ್ಲಿಲ್ಲಿ ಶೋಧ
ಮಾಡಬೇಕೆ ಇರಲು ಅಬ್ದುಲ್ ಹಮೀದ
ಮೊನ್ನೆ ಮೊನ್ನೆಯೆ ಬದುಕಿ ದಂತಕತೆಯಾದ

## ಕವಿಪರಿಚಯ



**ಡಾ. ಸುಮತೀಂದ್ರ ರಾಘವೇಂದ್ರ ನಾಡಿಗ**ರು ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ ೪-೫-೧೯೩೫ರಂದು ಜನಿಸಿದರು. ಮೈಸೂರು ವಿಶ್ವವಿದ್ಯಾಲಯ ಮತ್ತು ಯು.ಎಸ್.ಎ.ಯ ಟೆಂಪಲ್ ವಿಶ್ವವಿದ್ಯಾಲಯಗಳಿಂದ ಆಂಗ್ಲಭಾಷೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಶ್ರೀ ನಾಡಿಗರು ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಗಳಿಸಿದರು. ೧೯೯೬ರಿಂದ ೧೯೯೯ರ ವರೆಗೆ ನ್ಯಾಶನಲ್ ಬುಕ್‌ಟ್ರಸ್ಟ್‌ನ ಅಧ್ಯಕ್ಷರಾಗಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ದಿನಕರ ಪ್ರತಿಷ್ಠಾನ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ನಿರಂಜನ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಸಾಹಿತ್ಯ ಸಿರಿ ಪ್ರಶಸ್ತಿ, ವಿ.ಎಂ. ಇನಾಂದಾರ್ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಬಂಗಾಳಿ ಭಾಷೆಯಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಆಂಗ್ಲಭಾಷೆಗೆ ಹಲವಾರು ಕೃತಿಗಳನ್ನು ಭಾಷಾಂತರ ಮಾಡಿದ್ದಾರೆ. ಜಡ ಮತ್ತು ಚೇತನ, ಪಂಚಭೂತಗಳು, ಸಮಗ್ರ ಕಾವ್ಯ, ನಟರಾಜ ಕಂಡ ಕಾಮನಬಿಲ್ಲು, ಕುಹೂಗೀತ, ತಮಾಷೆ ಪದ್ಯಗಳು ಮೊದಲಾದವು ಇವರ ಕವನ ಸಂಕಲನಗಳಾಗಿವೆ. ಮೌನದಾಚೆಯ ಮಾತು, ನಾಲ್ಕನೆಯ ಸಾಹಿತ್ಯ ಚರಿತ್ರೆ , ಇನ್ನೊಂದು ಸಾಹಿತ್ಯ ಚರಿತ್ರೆ, ವಿಮರ್ಶೆಯ ದಾರಿಯಲ್ಲಿ, ಕಾವ್ಯ ಎಂದರೇನು? ಇತ್ಯಾದಿ ವಿಮರ್ಶಾಕೃತಿಗಳನ್ನೂ ಧ್ರುವ ಮತ್ತು ಪ್ರಹ್ಲಾದ, ಗೂಬೆಯ

ಕಥೆ, ಇಲಿ ಮದುವೆ, ಗಾಳಿಪಟ ಮೊದಲಾದ ಮಕ್ಕಳ ಕೃತಿಗಳನ್ನೂ ಸ್ಥಿತಪ್ರಜ್ಞ, ಆಯ್ದ ಕಥೆಗಳು ಗಿಳಿ ಮತ್ತು ದುಂಬಿ, ಕಾರ್ಕೋಟಕ ಇತ್ಯಾದಿ ಸಣ್ಣ ಕಥಾಸಂಕಲನಗಳನ್ನು ಇವರು ರಚಿಸಿದ್ದಾರೆ. ನಾಡಿಗರು ಬರೆದ 'ದಾಂಪತ್ಯ ಗೀತೆ' ಮತ್ತು ಇವರ ಕೆಲವು ಸಣ್ಣಕಥೆಗಳು ಹಲವಾರು ಭಾರತೀಯ ಭಾಷೆಗಳಿಗೆ ಭಾಷಾಂತರಗೊಂಡಿವೆ. ಇವರು ದಿನಾಂಕ ೭.೮.೨೦೧೮ ರಂದು ನಿಧನರಾದರು.

'ಅಬ್ದುಲ್ ಹಮೀದ' ಕಥನ ಕವನವನ್ನು ಸುಮತೀಂದ್ರ ನಾಡಿಗರ 'ಆರು ಕಾವ್ಯಗಳು' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1. ಕವಿಯು ಅಬ್ದುಲ್ ಹಮೀದನನ್ನು ಅಭಿಮನ್ಯುವಿಗೆ ಹೋಲಿಸಲು ಕಾರಣವೇನು?
2. ಹಮೀದನು ಯುದ್ಧವೆಂಬ ಅಗ್ನಿ ಪರೀಕ್ಷೆಯನ್ನು ಗೆದ್ದ ಬಗೆ ಹೇಗೆ?
3. ಅಬ್ದುಲ್ ಹಮೀದನು ಹೇಗೆ ಭೂಮಿಗೆ ಕೆಡೆದನು?
4. ಹಮೀದನ ವೀರಮೃತ್ಯುವನ್ನು ಅರಿತ ತಂದೆ ಉಸ್ಮಾನ್ ಖಲೀಫ ಏನೆಂದು ಹೇಳಿದರು?

## ಗದ್ಯರೂಪದಲ್ಲಿ ಬರೆಯಿರಿ

- 'ಅಬ್ದುಲ್ ಹಮೀದ' ಕಥನಕವನದ ಕಥೆಯನ್ನು ಗದ್ಯರೂಪದಲ್ಲಿ ಬರೆಯಿರಿ.

## ಘೋಷಣ ವಾಕ್ಯ ಬರೆಯಿರಿ

- ಯುದ್ಧವಿರೋಧಿ ಮನೋಭಾವವನ್ನು ಬೆಳೆಸುವಂತಹ ಘೋಷಣ ವಾಕ್ಯಗಳನ್ನು ಬರೆಯಿರಿ.

## ದೂರದರ್ಶನ ವಾರ್ತೆ ತಯಾರಿಸಿರಿ

- ಅಬ್ದುಲ್ ಹಮೀದನ ವೀರಮರಣದ ವಿಚಾರವನ್ನು ದೂರದರ್ಶನದಲ್ಲಿ ಪ್ರಸಾರ ಮಾಡುವುದಕ್ಕಾಗಿ ಲಿಖಿತವಾರ್ತೆಯೊಂದನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.

## ಪ್ರಬಂಧ ಬರೆಯಿರಿ

- 'ಯುದ್ಧದ ಪರಿಣಾಮಗಳು' ಎಂಬ ವಿಷಯದ ಕುರಿತು ತರಗತಿಯಲ್ಲಿ ನಡೆಯುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಪ್ರಬಂಧವೊಂದನ್ನು ಬರೆಯಿರಿ.

## ಆಲ್ಬಂ ತಯಾರಿಸಿರಿ

- ಮಾತೃಭೂಮಿಗಾಗಿ ಪ್ರಾಣಾರ್ಪಣೆ ಮಾಡಿದ ವೀರಯೋಧರ ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.



# ಜಿ. ಶಂಕರ ಕುರುಪ್

- ನಾ. ದಾ. ಶೆಟ್ಟಿ

**ಶಂ**ಕರಾಚಾರ್ಯರು ಜನಿಸಿದ ಮಧ್ಯ ಕೇರಳದ ಕಾಲಡಿಯ ಹತ್ತಿರದ ನಾಯತ್ತೋಡು ಎಂಬಲ್ಲಿ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ೧೯೦೧ ಜೂನ್ ೩ರಂದು ಜಿ. ಶಂಕರ ಕುರುಪ್ ಜನಿಸಿದರು. ತಂದೆ ಶಂಕರ ವಾರಿಯರ್, ತಾಯಿ ಲಕ್ಷ್ಮಿಕುಟ್ಟಿ ಅಮ್ಮ. ಎಳವೆಯಲ್ಲೇ ತಂದೆಯನ್ನು ಕಳೆದುಕೊಂಡ ಅವರನ್ನು ಮಾವ ಗೋವಿಂದ ಕುರುಪ್ ಸಾಕಿ ಸಲಹಿದರು. ತಾವು ಸ್ವತಃ ಸಂಸ್ಕೃತ ಪಂಡಿತರೂ ಪ್ರಸಿದ್ಧ ಜ್ಯೋತಿಷಿಗಳೂ ಆಗಿದ್ದುದರಿಂದ ಗೋವಿಂದ ಕುರುಪ್ ಅಳಿಯನನ್ನು ತಿದ್ದುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು.

ಶಂಕರ ಕುರುಪ್ ಅವರಿಗೆ ಪ್ರಕೃತಿ ಎಂದರೆ ಬಲು ಇಷ್ಟ. ಅದರಲ್ಲೂ ಹೂ ಹಾಗೂ ನಕ್ಷತ್ರ ಅವರ ಒಡನಾಡಿಗಳು. ಆಗಿನ ದಿವಸಗಳಲ್ಲಿ ಹಲವಾರು ಅಧ್ಯಾಪಕರು ಅವರಿಗೆ ದಾರಿದೀಪಗಳಾದರು. ಅದರಲ್ಲೂ ಕಾವ್ಯಪ್ರೇಮಿಯೂ ಸಂಸ್ಕೃತ ಪಂಡಿತರೂ ಆಗಿದ್ದ ಆರ್. ಸಿ. ಶರ್ಮಾ ಎಂಬ ಗುರುಗಳು ಎಲ್ಲರಿಗಿಂತಲೂ ಪ್ರತಿಭಾವಂತರಾದ ಶಂಕರ ಕುರುಪ್ ಅವರನ್ನು ವಿಶೇಷವಾಗಿ ಮೆಚ್ಚಿಕೊಂಡರು. ಕವಿತೆ ಬರೆಯಬೇಕೆನ್ನುವ ವಿದ್ಯಾರ್ಥಿಯ ಆಸೆಯನ್ನು ಅವರು ಇನ್ನಷ್ಟು ಪುಷ್ಟಿಗೊಳಿಸಿದರು. ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಶಂಕರ ಕುರುಪ್ ಅವರ ಮೊದಲ ಕವನ ಪತ್ರಿಕೆಯಲ್ಲಿ ಪ್ರಕಟಗೊಂಡಿತು. ಆದರೆ ಬಡತನ ಅವರ ಕಲಿಕೆಗೆ ಅಡ್ಡಬಂತು. ತಾಯಿಯೇ ಎಲ್ಲವನ್ನೂ ನೋಡಿಕೊಳ್ಳಬೇಕಾದ ಪರಿಸ್ಥಿತಿ ಬಂದುದರಿಂದ ಮಲಯಾಳದಲ್ಲಿ ಪಂಡಿತ ಪರೀಕ್ಷೆ ಮುಗಿಸಿದ ಕೂಡಲೆ ಅವರು ಅಧ್ಯಾಪಕ ವೃತ್ತಿಗೆ ಸೇರಬೇಕಾಯಿತು.

ಶಂಕರ ಕುರುಪ್ ಅವರು ತ್ರಿಶೂರಿನ ರಾಮವರ್ಮ ಇನ್‌ಸ್ಟಿಟ್ಯೂಟ್‌ನಲ್ಲಿ ಅಧ್ಯಾಪಕರಾದರು. ಅಲ್ಲಿ ಗೆಳೆಯರ ಜೊತೆ ಸೇರಿಕೊಂಡು ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯವನ್ನು

ಅಭ್ಯಾಸ ಮಾಡಿಕೊಂಡರು. ತಮ್ಮ ಅಧ್ಯಾಪನದ ಜೊತೆಗೆ ಸಂಸ್ಕೃತದಲ್ಲಿ ಉನ್ನತ ವ್ಯಾಸಂಗವನ್ನೂ ಮಾಡಿದರು. ಮಲಯಾಳಂ ಭಾಷೆಯಲ್ಲಿ ವಿದ್ವತ್ತನ್ನೂ ಸಂಪಾದಿಸಿಕೊಂಡರು. ೧೯೨೧ರಲ್ಲಿ ಕೊಚ್ಚಿ ರಾಜ್ಯ ಸರಕಾರದ ಅಧೀನದಲ್ಲಿರುವ ಸಂಸ್ಥೆಯಲ್ಲಿ ಅಧ್ಯಾಪಕರಾದರು. ಅವರ "ಸಾಹಿತ್ಯ ಕೌತುಕಂ" ಎಂಬ ಮೊದಲ ಕವನ ಸಂಕಲನ ಅಲ್ಲಿದ್ದಾಗಲೇ ಪ್ರಕಟಗೊಂಡಿತು. ಮಹಾಕವಿ ವಳ್ಳತ್ತೋಳ್ ಅವರನ್ನು ಆದರ್ಶವಾಗಿಟ್ಟುಕೊಂಡು ಸಾಹಿತ್ಯ ಕ್ಷೇತ್ರದಲ್ಲಿ ಅವರು ಮುಂದುವರಿದರು. ಸಾಹಿತ್ಯ ಲೋಕದಲ್ಲಿ ಅವರು 'ಜಿ' ಎಂದೇ ಖ್ಯಾತರಾದರು.

ನಾಲ್ಕು ವರ್ಷಗಳ ಬಳಿಕ 'ಜಿ' ಅವರು ಚಾಲಕ್ಕುಡಿ ಎಂಬಲ್ಲಿಗೆ ವರ್ಗಾವಣೆಗೊಂಡರು. ಅದು ಕೂಡ ನಿಸರ್ಗದ ಮಡಿಲು. ಅಲ್ಲೊಂದು ನದಿ. ಅದರ ದಡದಲ್ಲೊಂದು ಕುಟೀರ. ಅಲ್ಲಿ ಒಂಟಿಯಾಗಿ ಕುಳಿತು ಕವನ ರಚಿಸುವುದೆಂದರೆ ಅವರಿಗೆ ಅಚ್ಚುಮೆಚ್ಚು. ಮುಂದೆ ತ್ರಿಶೂರಿನ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ದುಡಿಯತೊಡಗಿದರು. ಆಗ ಇಂಗ್ಲಿಷನ್ನು ಅವರು ಮತ್ತಷ್ಟು ಕರಗತ ಮಾಡಿಕೊಂಡರು. ಅದರ ಪರಿಣಾಮವಾಗಿ ಹಲವು ಆಂಗ್ಲಭಾಷಾ ಕೃತಿಗಳನ್ನು ಅವರು ಮಲಯಾಳಕ್ಕೆ ಅನುವಾದಿಸಿದರು. ರವೀಂದ್ರನಾಥ ಟಾಗೋರರ ತತ್ತ್ವಾದರ್ಶಗಳಿಂದ ಪ್ರಭಾವಿತರಾಗಿದ್ದ ಇವರು ಟಾಗೋರರ ಗೀತಾಂಜಲಿ, ಏಕೋತ್ತರಶತಿಗಳನ್ನು ಮಲೆಯಾಳಕ್ಕೆ ಅನುವಾದಿಸಿದರು. ಮಾತ್ರವಲ್ಲ ಪರ್ಶಿಯನ್ ಭಾಷೆಯಿಂದ 'ಗುಲಾಬಿ ತೋಟ', ಉಮರ್ ಖಯಾಮನ 'ರುಬಾಯಿಯತ್' ಎಂಬೀ ಕೃತಿಗಳನ್ನು ಮಲಯಾಳಕ್ಕೆ ಅನುವಾದಿಸಿದರು.

೧೯೩೧ರಲ್ಲಿ 'ಜಿ' ಅವರಿಗೆ ಕೇರಳದ ತಿರುವಂಜಿಕ್ಕುಳಂ ಎಂಬ ಊರಿನ ಸುಭದ್ರಮ್ಮ ಎಂಬಾಕೆಯೊಡನೆ ವಿವಾಹವಾಯಿತು. ಅವರು ಸಾಹಿತ್ಯ ಸಂವೇದನೆಯುಳ್ಳ ಕುಟುಂಬದಿಂದಲೇ ಬಂದವರು. ಪತಿಯೊಂದಿಗೆ ಅವರದು ಅನ್ಯೋನ್ಯದ ಬಾಳುವೆಯಾಗಿತ್ತು. ಈ ದಶಕದಲ್ಲಿ 'ಜಿ' ಅವರು ಸೂರ್ಯಕಾಂತಿ, ನವಾತಿಥಿ ಮುಂತಾದ ಕೃತಿಗಳನ್ನು ರಚಿಸಿದರು.

ಅವರ ಬರಹಗಳಲ್ಲಿ ವೈಜ್ಞಾನಿಕ ಒಳನೋಟವೂ ವೈದಿಕ ಸಾಹಿತ್ಯದ ದರ್ಶನವೂ ಕಾಣಸಿಗುತ್ತದೆ. ಆಧ್ಯಾತ್ಮಿಕ ಚಿಂತನೆ ಅವರ ಕವನಗಳಲ್ಲಿ ಹಾಸುಹೊಕ್ಕಾಗಿದೆ. ಅವರಿಗೆ ಶಿವನೂ ಒಂದೇ, ಬುದ್ಧನೂ ಒಂದೇ. ದೇವರು ಸರ್ವಶಕ್ತಿಯ ಸಾರ ಎಂಬುದು ಅವರ ನಂಬಿಕೆ. ಅವರದು ಗಾಢವಾದ ಧಾರ್ಮಿಕ ಶ್ರದ್ಧೆ.

"ಭಕ್ತಿಯಾ ಮಾರ್ಗದಲ್ಲಿ ಓ ಜಗದ ಸಾರಥಿಯೆ<br>
ಕೊಂಡೊಯ್ಯು ನನ್ನ ಮನೋರಥವನ್ನು ಕೂಡ"

ಇದು ಅವರು ದೇವರಲ್ಲಿ ಮಾಡಿಕೊಳ್ಳುವ ಅರಿಕೆ. ಅವರು ಯಾವುದೇ ಕವನವನ್ನು ರಚಿಸಿದರೂ ಅದರೊಳಗೆ ಭಕ್ತಿಭಾವ ಕಣ್ಣಿಗೆ ಕಾಣಿಸದ ರೂಪದಲ್ಲಿ ಸೇರಿಕೊಂಡಿರುತ್ತದೆ. ಅವರ ಮೇಘದೂತ, ಕಾಡುಹೂ, ಸೂರ್ಯಕಾಂತಿ ಮುಂತಾದ ಕವನಗಳಲ್ಲಿ ಈ ಬಗೆಯ ಸತ್ವವನ್ನು ಕಾಣಬಹುದು.

ಅವರು ಮಕ್ಕಳಿಗಾಗಿಯೂ ಕವನಗಳನ್ನು ಬರೆದಿದ್ದಾರೆ. ಪ್ರಾಣಿಪಕ್ಷಿಗಳನ್ನೂ ಮಕ್ಕಳನ್ನೂ ವಸ್ತುವಾಗಿಟ್ಟುಕೊಂಡು ರಚಿಸಿದ 'ಇಳಂ ಚುಂಡುಗಳ್' (ಎಳೆಯ ತುಟಿಗಳು), 'ಓಲಪ್ಪೀಪಿ' (ತುತ್ತೂರಿ) ಎಂಬ ಕವನಸಂಕಲನಗಳೂ 'ಕಾಟ್ಟೇ ವಾ, ಕಡಲೇ ವಾ' (ಗಾಳಿಯೇ ಬಾ, ಸಮುದ್ರವೇ ಬಾ) ಎಂಬ ಕವನ ಸಂಕಲನವೂ ಅವರ ಮುಖ್ಯ ಶಿಶುಸಾಹಿತ್ಯಕೃತಿಗಳು.

'ಪ್ರೇಮಭಿಕ್ಷು' ಎಂಬುದು ಅವರು ಬರೆದ ಗೀತನಾಟಕ. ಈ ನಾಟಕದಲ್ಲಿ ರಾಧೆ

ಹಾಗೂ ಕೃಷ್ಣ ಸಾಮಾನ್ಯ ಮನುಷ್ಯರಂತೆ ಕಾಣಿಸುತ್ತಾರೆ. ಯಮುನಾ ನದಿಯ ದಂಡೆಯಲ್ಲಿ ಒಂದು ಗುಡಿಸಲು. ಅಲ್ಲಿ ರಾಧೆಯು ಕೃಷ್ಣನನ್ನು ಕಾಯುತ್ತಾ ಕುಳಿತಿರುತ್ತಾಳೆ. ಕೃಷ್ಣ ಬರುವುದೇ ಇಲ್ಲ! ತುಂಬ ಹೊತ್ತಿನ ಬಳಿಕ ತರುಣ ಭಿಕ್ಷುಕನೊಬ್ಬ ಆ ದಾರಿಯಾಗಿ ಬರುತ್ತಾನೆ. ಆತ ಒಂದು ಹಾಡನ್ನು ಹಾಡುತ್ತಾನೆ. ಹಾಡು ಮುಗಿದ ಮೇಲೆ ಆತ ರಾಧೆಯ ಮುಂದೆ ಒಂದು ಬೇಡಿಕೆಯಿಡುತ್ತಾನೆ: 'ನಿಮ್ಮ ಕೇಶರಾಶಿಯಿಂದ ನನಗೊಂದು ಕೂದಲು ಕೊಡಿ. ನಾನದನ್ನು ನಿಮ್ಮ ನೆನಪಿಗೋಸ್ಕರ ಇಟ್ಟುಕೊಳ್ಳುತ್ತೇನೆ' ಎನ್ನುತ್ತಾನೆ. ಕೂಡಲೇ ಅವಳಿಗೆ ಭಿಕ್ಷುಕ ಮತ್ತ್ಯಾರೂ ಅಲ್ಲ, ಶ್ರೀಕೃಷ್ಣನೇ ಎಂಬುದು ಅರಿವಿಗೆ ಬರುತ್ತದೆ. ದೇವರು ಯಾವ ರೂಪದಲ್ಲಿ ಬೇಕಾದರೂ ನಮ್ಮ ಬಳಿ ಬರಬಹುದು, ನಮ್ಮನ್ನು ಪರೀಕ್ಷಿಸಬಹುದು ಎಂಬ ಸಿದ್ಧಾಂತವನ್ನು ಜಿ. ಶಂಕರ ಕುರುಪ್ ಅವರು ಬಹಳ ಸರಳವಾದ ರೀತಿಯಲ್ಲಿ ನಿರೂಪಿಸಿದ್ದಾರೆ.

'ಹೆಂಗಸು' ಎಂಬ ಕವಿತೆಯಲ್ಲಿ ನಾಯಕನಾದ ವಿಕ್ರಮನ್ ತನ್ನ ಹೆಂಡತಿಯ ನೆನಪಾಗಿ ಯುದ್ಧ ಭೂಮಿಯನ್ನು ಬಿಟ್ಟುಬರುತ್ತಾನೆ. ಹೆಂಡತಿಯಾದರೋ ತನ್ನ ಗಂಡ ಯುದ್ಧದಲ್ಲಿ ಗೆದ್ದು ಬಂದನೆಂದು ತಿಳಿದು ಸಂತಸಪಡುತ್ತಾಳೆ. ನಿಜ ಗೊತ್ತಾದಾಗ ಆಕೆಯ ಉತ್ಸಾಹ ಕುಗ್ಗುತ್ತದೆ. ಆಕೆಯ ಮನಸ್ಸಿನಲ್ಲೊಂದು ವಿಚಿತ್ರ ಆಲೋಚನೆ ಹುಟ್ಟಿಕೊಳ್ಳುತ್ತದೆ. ತನ್ನ ಗಂಡನ ಮನಸ್ಸನ್ನು ಯುದ್ಧಭೂಮಿಯಿಂದ ತನ್ನತ್ತ ಸೆಳೆದ ತಾನು ಬದುಕಿರಕೂಡದು ಎಂದು ಆಕೆ ಭಾವಿಸುತ್ತಾಳೆ. ಖಡ್ಗವನ್ನು ಕೈಗೆತ್ತಿಕೊಳ್ಳುತ್ತಾಳೆ. ಕೂಡಲೆ ತನ್ನ ತಪ್ಪಿನ ಅರಿವಾದ ಗಂಡ ಆಕೆಯ ಕೈಯಿಂದ ಖಡ್ಗವನ್ನು ಸೆಳೆದುಕೊಳ್ಳುತ್ತಾನೆ. 'ನಾ ಸಾವಿನಲ್ಲೇ ಚಿರಾಯುವಾಗುವೆ' ಎನ್ನುತ್ತಾ ಆತ ಹೋರಾಟದ ಕಡೆಗೆ ಮತ್ತೆ ಮುಖ ಮಾಡುತ್ತಾನೆ. 'ದೇಶಪ್ರೇಮವು ಸಂಸಾರದ ಸುಖಕ್ಕಿಂತ ದೊಡ್ಡದು' ಎಂಬ ಪಾಠವನ್ನು ಆಕೆ ಗಂಡನಿಗೆ ಹೇಳಿಕೊಡುವ ರೀತಿ ಅನನ್ಯವಾಗಿದೆ.

'ಏಷ್ಯಾದ ಆತ್ಮ' ಎಂಬ ಕವನದಲ್ಲಿ ಚಿಟ್ಟೆಯೊಂದನ್ನು ಗಾಜಿನ ಸೀಸೆಯೊಂದರಲ್ಲಿ ಬಂಧಿಸಿಟ್ಟ ಸಾಂಕೇತಿಕ ವಿವರಣೆಯಿದೆ. ಹೊರಗಡೆಯಿಂದ ಆ ಚಿಟ್ಟೆಯನ್ನು ಸ್ವಾತಂತ್ರ್ಯದ ಬೆಳಕು ಸನ್ನೆ ಮಾಡಿ ಕರೆಯುತ್ತದೆ. ಅದು ಹೊರಗಡೆಗೆ ಜಿಗಿದು ಹಾರಲು ಯತ್ನಿಸುತ್ತದೆ. ಆ ಯತ್ನದಲ್ಲಿ ಗಾಜಿಗೆ ಢಿಕ್ಕಿ ಹೊಡೆದು ಮತ್ತೆ ಒಳಗಡೆ ಬೀಳುತ್ತದೆ. ಸಾಮ್ರಾಜ್ಯಶಾಹಿಯ ರಕ್ಷಕರು ಅದರ ಕಿವಿಯಲ್ಲಿ 'ಸುಮ್ಮನಿರು! ನಾವು ನಿನ್ನನ್ನು ಹಸಿದ ಹಕ್ಕಿಗಳಿಂದ ಕಾಪಾಡಬೇಕಾಗಿದೆ' ಎನ್ನುತ್ತಾರೆ. 'ಸ್ವಾತಂತ್ರ್ಯವನ್ನು ಕಳೆದುಕೊಂಡ ಹಕ್ಕಿಯ ಪಾಡು ನಮ್ಮದಾಗಿದೆ' ಎಂದು ಅವರು ಎಷ್ಟು ಮನೋಜ್ಞವಾಗಿ ಚಿತ್ರಿಸಿದ್ದಾರೆ!

'ಭಾರತೇಂದು' ಕವನವು ಮಹಾತ್ಮ ಗಾಂಧಿಯವರ ಸಾವಿನಿಂದ ದುಃಖಿತರಾಗಿದ್ದಾಗ ಮೂಡಿಬಂದುದಾಗಿದೆ. ಹೀಗೆ ದೇಶಕ್ಕೆ ದುರ್ಗತಿ ಬಂದಾಗಲೆಲ್ಲ ಇವರ ಕವಿಹೃದಯ ಮಿಡಿಯುತ್ತಿತ್ತು. ಮಹಾತ್ಮ ಗಾಂಧಿ ಹಾಗೂ ರವೀಂದ್ರನಾಥ ಠಾಗೋರರ ಬರವಣಿಗೆಗಳು ಇವರ ಆಲೋಚನೆಗಳಿಗೆ ಸರಿಯಾದ ರೂಪಕೊಡಲು ಸಹಾಯಕವಾದುವು.

'ತಾಯಿ ಮತ್ತು ಮಗ' ಎಂಬ ಕವನದಲ್ಲಿ ಕೇರಳದ ಕರಾವಳಿಯಲ್ಲಿ ತೀರಾ ಬಡತನದ ಬಾಳನ್ನು ನಡೆಸುವ ಬೆಸ್ತರ ಬದುಕಿನ ವಾಸ್ತವ ಚಿತ್ರಣವೊಂದು ಲಭಿಸುತ್ತದೆ. ವಿಶಾಲವಾದ ಸಾಗರ ಹಾಗೂ ಎಲ್ಲ ಪ್ರತಿಕೂಲ ಸ್ಥಿತಿಗಳನ್ನು ಎದುರುಹಾಕಿಕೊಳ್ಳುತ್ತ, ಹೋರಾಡುತ್ತ ಬದುಕುವ ಕಡಲ ಮಕ್ಕಳ ಸುಂದರ ಚಿತ್ರಣ ಇಲ್ಲಿದೆ.

'ಜೀವನ ಸಂಗೀತಂ' ಎಂಬ ಕವನ ಸಂಕಲನದಲ್ಲಿ ಶಿವತಾಂಡವಂ, ಪಾಣನಾರ್ ಮುಂತಾದ ಪ್ರಸಿದ್ಧ ಕವನಗಳಿವೆ. ಪುರಾಣ ವಸ್ತುಗಳನ್ನು ಜನಜೀವನಕ್ಕೆ ಹತ್ತಿರ ತಂದು ನೋಡುವ ಪ್ರಯತ್ನ ಈ ಕವನಗಳಲ್ಲಿವೆ.

'ಕರಿಯ ರೈಲು ಮತ್ತು ಅದರ ನಿಲ್ಲಿಸುವಿಕೆ' ಎಂಬ ಕವನವು 'ಜಿ'ಯವರ ಬದುಕಿಗೆ ನೇರವಾಗಿ ಅನ್ವಯಿಸುವಂತಿದೆ. ೧೯೬೨ರಲ್ಲಿ ಅವರಿಗೆ ಗಂಭೀರವಾದ ಹೃದ್ರೋಗ ತಗುಲಿತ್ತು. ಅವರ ಹೆಂಡತಿಯು ಬಹಳ ಎಚ್ಚರಿಕೆಯಿಂದ ಆರೈಕೆ ಮಾಡಿದ್ದರು. ರೈಲನ್ನು ಕೆಂಪು ದೀಪವು ನಿಲ್ಲಿಸುವಂತೆ ಅವರ ಹತ್ತಿರದಲ್ಲಿ ಸುಳಿದಿದ್ದ ಸಾವನ್ನು ಹೆಂಡತಿಯು ಹರಡಿದ್ದ ಪ್ರೀತಿಯೆಂಬ ಅರುಣಪ್ರಭೆಯು ತಡೆದು ನಿಲ್ಲಿಸಿತ್ತು. ಹೆಂಡತಿಯ ಆರೈಕೆಯಿಂದಾಗಿಯೇ ತಾನು ಮರುಜನ್ಮ ಪಡೆದೆ ಎಂದು 'ಜಿ'ಯವರು ಬಲವಾಗಿ ನಂಬಿದ್ದರು.

'ಕೊಳಲಿನ ಹುಡುಕಾಟದಲ್ಲಿ' ಎಂಬ ಇನ್ನೊಂದು ಕವನದಲ್ಲಿ ಕೃಷ್ಣನು ತನ್ನ ಹಳೆಯ ಕೊಳಲಿಗಾಗಿ ಹಳೆ ಬನ್ನಿ ಮರದ ಬಳಿಗೆ ಬರುವ ಚಿತ್ರಣವಿದೆ. ಧರ್ಮ ರಕ್ಷಣೆಗಾಗಿ ಕೃಷ್ಣ ಪಾಂಚಜನ್ಯ ಹಾಗೂ ಸುದರ್ಶನ ಚಕ್ರವನ್ನು ಹಿಡಿಯಬೇಕಾದ ಸನ್ನಿವೇಶ ಬಂದಾಗ ಆ ಕೊಳಲನ್ನು ಅವನು ಬನ್ನಿಯ ಪೊಟರೆಯಲ್ಲಿ ಬಿಟ್ಟು ಹೋಗುತ್ತಾನೆ. ಬಳಿಕ ಆಯುಧಗಳನ್ನೆಲ್ಲ ಬಿಟ್ಟು ತನ್ನ ಹಿಂದಿನ ದಿವ್ಯ ಸಂಗೀತಕ್ಕೆ ಮರಳುತ್ತಾನೆ. ಈ ಪ್ರತಿಮೆಗೂ ಕವಿಯ ಬದುಕಿಗೂ ನೇರ ಸಂಬಂಧವಿದೆ. ದೀನ-ದಲಿತರ ಮತ್ತು ನಿರ್ಗತಿಕರ ಸಂಕಷ್ಟ ಪರಿಹಾರಕ್ಕೆ ಕವಿ ಅದಾಗಲೇ ಸಾಕಷ್ಟು ಹೋರಾಟ ನಡೆಸಿದ್ದರು. ಇನ್ನೀಗ ಕೃಷ್ಣನು ಸುದರ್ಶನ ಚಕ್ರ ಬದಿಗಿಟ್ಟು ತನ್ನ ಹಳೆಯ ಕೊಳಲಿಗೆ ಮರಳಿದ ಹಾಗೆಯೇ ತಾವು ಕೂಡಾ ಶಾಂತವಾದ ಬದುಕಿನತ್ತ ಮುಖಮಾಡಿದ್ದರು ಎಂಬುದನ್ನು ಈ ಕವನ ಬಿಂಬಿಸುತ್ತದೆ.

೧೯೪೫ರಿಂದ ೫೫ರ ತನಕದ ಅವಧಿಯಲ್ಲಿ ನಾಲ್ಕು ಕವನ ಸಂಕಲನಗಳನ್ನು (ಎಸಳುಗಳು, ಪಥಿಕನ ಹಾಡು, ಅಂತರ್ದಾಹ, ಬೆಳ್ಳಕ್ಕಿಗಳು) ಹಾಗೂ ಒಂದು ಆಯ್ದ ಕವನ ಸಂಕಲನವನ್ನು (ಓಡಕ್ಕುಳಲ್) 'ಜಿ'ಯವರು ಪ್ರಕಟಿಸಿದ್ದರು. 'ಓಡಕ್ಕುಳಲ್' (ಬಿದಿರಿನ ಕೊಳಲು) ಸಂಕಲನದಲ್ಲಿ ಅರುವತ್ತು ಕವನಗಳಿವೆ. ಮಲಯಾಳದ ಪ್ರಸಿದ್ಧ ವಿಮರ್ಶಕರಾದ ಪ್ರೊ. ಎಸ್. ಗುಪ್ತನ್ ನಾಯರ್ ಆ ಸಂಕಲನಕ್ಕೆ ಮುನ್ನುಡಿ ಬರೆಯುತ್ತ 'ಜಿ'ಯವರ ಕಾವ್ಯ ಬೆಳವಣಿಗೆಯ ಒಟ್ಟು ಅವಲೋಕನವನ್ನು ಮಾಡಿದ್ದರು. ೧೯೫೦ರಲ್ಲಿ ಪ್ರಕಟಿಸಲಾದ ಆ ಸಂಕಲನವು ಎಷ್ಟು ಅದ್ಭುತವಾಗಿ ಇತ್ತೆಂದರೆ 'ಜಿ'ಯವರಿಗೆ ಆ ಕೃತಿಯೇ ಮೊತ್ತಮೊದಲ ಜ್ಞಾನಪೀಠ ಪ್ರಶಸ್ತಿಯನ್ನೂ ತಂದುಕೊಟ್ಟಿತು!

ಕೇರಳ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದ 'ಜಿ'ಯವರು 'ಕೈರಳಿ' ಪತ್ರಿಕೆಯ ಸಂಪಾದಕರೂ ಆಗಿದ್ದರು. ತಿಲಕಮ್ ಎಂಬ ಪತ್ರಿಕೆಯನ್ನು ಹುಟ್ಟುಹಾಕಿ ತಾವು ಅದರ ಸ್ಥಾಪಕ ಸಂಪಾದಕರೂ ಆದರು. 'ಪೆನ್' ಎಂಬ ಪ್ರತಿಷ್ಠಿತ ಸಂಸ್ಥೆಗೆ ಹಾಗೂ ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್‌ಗಳಿಗೆ 'ಜಿ'ಯವರು ಗೌರವ ಸದಸ್ಯರಾಗಿದ್ದರು. ಅಷ್ಟು ಮಾತ್ರವಲ್ಲದೆ ಭಾರತೀಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರು.

ಜಿ. ಶಂಕರ ಕುರುಪ್ ಅವರಿಗೆ ಹಲವಾರು ಪ್ರಶಸ್ತಿಗಳು ಲಭಿಸಿದ್ದವು. ಇವರ 'ವಿಶ್ವದರ್ಶನಂ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿವೆ. ಸಂಸ್ಕೃತ ವಿದ್ವತ್ ಲೋಕ ಹಾಗೂ ಆಗಿನ ಕೊಚ್ಚಿನ್ ಮಹಾರಾಜರು

ಇವರಿಗೆ ‘ಸಾಹಿತ್ಯ ನಿಪುಣ’ ಮತ್ತು ‘ಕವಿತಿಲಕ’ ಎಂಬ ಬಿರುದುಗಳನ್ನಿತ್ತು ಗೌರವಿಸಿದ್ದಾರೆ. ಸೋವಿಯತ್ ಲ್ಯಾಂಡ್ ಪ್ರಶಸ್ತಿಯೂ ಬಂದಿದೆ. ಬರಹಗಾರರ ಸಹಕಾರಿ ಸಂಸ್ಥೆ ‘ಕೃಷ್ಣ ಕಲ್ಯಾಣಿ’ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಸುಮಾರು ನಲುವತ್ತರಷ್ಟು ಕೃತಿಗಳನ್ನು ಮಹಾಕವಿ ಶಂಕರ್ ಕುರುಪ್ ಅವರು ರಚಿಸಿದ್ದು ಅದರಲ್ಲಿ ಇಪ್ಪತ್ತೈದು ಕವನ ಸಂಕಲನಗಳು, ಮಿಕ್ಕವು ನಾಟಕ, ವ್ಯಾಕರಣ, ಲೇಖನಗಳ ಸಂಕಲನ, ವಿವಿಧ ಅನುವಾದ - ಇತ್ಯಾದಿಗಳು. ಅವರ ಕವನಗಳಲ್ಲಿ ಹೆಚ್ಚಿನವು ಭಾವಗೀತೆಗಳಾಗಿವೆ.

ಅತ್ಯಂತ ಸರಳರೀತಿಯಲ್ಲಿ ಬದುಕಿ ಕೊನೆಯವರೆಗೂ ಸಾಹಿತ್ಯ ಸೇವೆ ಮಾಡಿ ಲೋಕೋತ್ತರ ಪ್ರಸಿದ್ಧಿ ಪಡೆದ ‘ಜಿ’ ಅವರು ತನ್ನ ೭೭ರ ಹರೆಯದಲ್ಲಿ ೧೯೭೮ ಫೆಬ್ರುವರಿ ೨ರಂದು ಹೃದಯ ಸ್ತಂಭನದಿಂದ ನಿಧನರಾದರು. ಅವರ ನೆನಪನ್ನು ಶಾಶ್ವತಗೊಳಿಸುವಂತೆ ಭಾರತ ಸರಕಾರವು ‘ಜಿ’ಯವರ ಚಿತ್ರವಿರುವ ಅಂಚೆಚೀಟಿಯನ್ನು ಬಿಡುಗಡೆ ಮಾಡಿದೆ. ಹತ್ತೊಂಭತ್ತು ವರ್ಷಗಳ ಕಾಲ ಅಧ್ಯಾಪಕರಾಗಿ ದುಡಿದ ಎರ್ನಾಕುಳಂ ಮಹಾರಾಜಾ ಕಾಲೇಜಿನಲ್ಲಿ ಅವರ ಹೆಸರಿನಲ್ಲೊಂದು ಸಭಾಂಗಣವೂ ನಿರ್ಮಾಣಗೊಂಡಿದೆ.



## ಲೇಖಕರ ಪರಿಚಯ

**ಡಾ. ನಾ. ದಾಮೋದರ ಶೆಟ್ಟಿ** ಕುಂಬಳೆಯ ನಾಯ್ಕಾಪಿನಲ್ಲಿ ಕುಞ್ಞಿಕಣ್ಣ ಚೆಟ್ಟಿಯಾರ್ ಹಾಗೂ ಕುಞ್ಞಮ್ಮ ದಂಪತಿಗಳ ಮಗನಾಗಿ ೦೨-೦೮-೧೯೫೧ರಂದು ಜನಿಸಿದರು. ಸೂರಂಬೈಲು, ಕುಂಬಳೆ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಇವರು ಕಾಸರಗೋಡು, ಮಂಗಳೂರು, ಮೈಸೂರುಗಳಲ್ಲಿ ಉನ್ನತಶಿಕ್ಷಣವನ್ನು ಪಡೆದರು. ೧೯೭೫ರಲ್ಲಿ ಮಂಗಳೂರಿನ ಸಂತ ಅಲೋಷಿಯಸ್ ಕಾಲೇಜಿನಲ್ಲಿ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾದರು. ೩೬ ವರ್ಷಗಳ ಕಾಲ ಅದೇ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ೨೦೧೧ರಲ್ಲಿ ನಿವೃತ್ತರಾದರು.

ಒಡೆದ ಮುತ್ತುಗಳು, ಹಾಡು ಮನವೆ ಹಾಡು ಮುಂತಾದ ಕವನಸಂಕಲಗಳನ್ನು ಇವರು ರಚಿಸಿದ್ದಾರೆ. ದೇವರ ವಿಕರಾಳಗಳು, ಅಶ್ವತ್ಥಾಮ, ಮೂರುಹೆಜ್ಜೆ ಮೂರುಲೋಕ, ಒ.ಎನ್.ವಿ. ಕುರುಪರ ಆಯ್ದ ಕವನಗಳು ಮುಂತಾದ ಹಲವು ಕೃತಿಗಳನ್ನು ಮಲಯಾಳ ಹಾಗೂ ತುಳುಭಾಷೆಗಳಿಂದ ಅನುವಾದಿಸಿದ್ದಾರೆ. ಸುಳಿವಿನೊಳಗೆ, ಸರದಿ ಇವರು ಬರೆದ ಕಾದಂಬರಿಗಳಾಗಿವೆ. ಅರ್ಪಣೆ, ಹೂಮನಸು, ಪ್ರಜೆ ಇವರು ಬರೆದ ನಾಟಕಗಳು. ಖ್ಯಾತ ನಿರ್ದೇಶಕ ಅಡೂರು ಗೋಪಾಲಕೃಷ್ಣನ್ ನಿರ್ದೇಶಿಸಿದ ರಾಷ್ಟ್ರಪ್ರಶಸ್ತಿ ವಿಜೇತ ವಿಧೇಯನ್ ಚಲನಚಿತ್ರಕ್ಕೆ ಸಹಾಯಕ ನಿರ್ದೇಶಕರಾಗಿದ್ದರು.

೨೦೧೪ರಲ್ಲಿ ನಡೆದ ಕಾಸರಗೋಡು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಈ ಪಾಠವನ್ನು ಅವರ 'ಮಹಾಕವಿ ಜಿ. ಶಂಕರಕುರುಪ್' ಎನ್ನುವ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಜಿ. ಶಂಕರ ಕುರುಪ್ ಅವರ ಬಾಲ್ಯಕಾಲ ಹೇಗಿತ್ತು?
2. ಶಂಕರ ಕುರುಪ್ ಅನುವಾದ ಮಾಡಿದ ಕೃತಿಗಳು ಯಾವುವು?
3. 'ಹೆಂಗಸು' ಕವಿತೆಯ ಆಶಯವೇನು?
4. 'ಕೊಳಲಿನ ಹುಡುಕಾಟದಲ್ಲಿ' ಕವನದ ವೈಶಿಷ್ಟ್ಯವೇನು?

## ಆತ್ಮಕಥೆಯಾಗಿ ಪರಿವರ್ತಿಸಿರಿ

ಕೆಳಗೆ ಕೊಡಲಾದ ಗದ್ಯಭಾಗವನ್ನು ಜಿ. ಶಂಕರ ಕುರುಪ್ ಅವರ ಆತ್ಮಕಥೆಯ ಭಾಗವಾಗುವಂತೆ ಪರಿವರ್ತಿಸಿ ಬರೆಯಿರಿ.

ಜಿ. ಶಂಕರ ಕುರುಪ್ ಅವರು ಶಂಕರಾಚಾರ್ಯರು ಜನಿಸಿದ ಮಧ್ಯಕೇರಳದ ಕಾಲಡಿಯ ಹತ್ತಿರ ನಾಯತ್ತೋಡು ಎಂಬಲ್ಲಿ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ೧೯೦೧ ಜೂನ್ ೩ರಂದು ಜನಿಸಿದರು. ಅವರ ತಂದೆ ಶಂಕರ ವಾರಿಯರ್. ಅವರ ತಾಯಿ ಲಕ್ಷ್ಮಿಕುಟ್ಟಿ ಅಮ್ಮ. ಶಂಕರ ಕುರುಪ್ ಅವರು ಗಾಢವಾದ ಧಾರ್ಮಿಕ ಶ್ರದ್ಧೆ ಉಳ್ಳವರು. ಎಳವೆಯಲ್ಲೇ ತಂದೆಯನ್ನು ಕಳೆದುಕೊಂಡ ಅವರನ್ನು ಮಾವ ಗೋವಿಂದ ಕುರುಪ್ ಸಾಕಿ ಸಲಹಿದರು. ಅವರು ಸಂಸ್ಕೃತ ಪಂಡಿತರೂ ಪ್ರಸಿದ್ಧ ಜ್ಯೋತಿಷಿಗಳೂ ಆಗಿದ್ದುದರಿಂದ 'ಜಿ'ಯವರನ್ನು ತಿದ್ದುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

## ಕೃತಿಪರಿಚಯ ಬರೆಯಿರಿ

- ನೀವು ಓದಿದ ಯಾವುದಾದರೂ ಪುಸ್ತಕದ ಪರಿಚಯ ಬರೆಯಿರಿ.

## ಸ್ಲೈಡ್ ತಯಾರಿಸಿರಿ

ಸಾಹಿತಿ ಜಿ. ಶಂಕರ ಕುರುಪ್ ಮೊತ್ತಮೊದಲ ಜ್ಞಾನಪೀಠ ಪ್ರಶಸ್ತಿ ವಿಜೇತರು. ಹಾಗೆಯೇ ಕನ್ನಡದ ಮೊತ್ತಮೊದಲ ಜ್ಞಾನಪೀಠ ಪ್ರಶಸ್ತಿ ವಿಜೇತರು ಕುವೆಂಪು ಎಂಬುದು ನಿಮಗೆ ತಿಳಿದಿದೆಯಲ್ಲವೇ? ಈ ಇಬ್ಬರು ಸಾಹಿತಿಗಳ ಮಾಹಿತಿ ಮತ್ತು ಭಾವಚಿತ್ರ ಸಂಗ್ರಹಿಸಿ ಸ್ಟೋರಿಬೋರ್ಡಿನ ಸಹಾಯದಿಂದ ಸ್ಲೈಡ್ ತಯಾರಿಸಿರಿ.

**ಸಂಧಿ ಗುರುತಿಸಿರಿ**

ವಿದ್ಯಾರ್ಥಿಯಾಗಿದ್ದ ಮಹೇಶನ ಗುಣವನ್ನು ಊರಿನವರೆಲ್ಲ ಮುಕ್ತಕಂಠದಿಂದ ಹೊಗಳಿದರು. ಮಹೇಶನ ಶಾಲೆಯಲ್ಲಿ ನಡೆದ ಸಭೆಯಲ್ಲಿ ಮುಖ್ಯೋಪಾಧ್ಯಾಯರು ಅವನ ಪರೋಪಕಾರಿ ಗುಣವನ್ನು ಹೊಗಳಿದರು. ಸಹೋದ್ಯೋಗಿಗಳೆಲ್ಲರು ಸೇರಿ ಅವನಿಗೆ ಬಹುಮಾನ ಕೊಡಲು ತೀರ್ಮಾನಿಸಿದರು.

ಅಡಿಗೆರೆ ಎಳೆದ ಪದಗಳನ್ನು ಹೀಗೆ ವಿಂಗಡಿಸಬಹುದು.

| | | |
|---|---|---|
| ಮಹೇಶ | - | ಮಹಾ + ಈಶ |
| ಮುಖ್ಯೋಪಾಧ್ಯಾಯ | - | ಮುಖ್ಯ + ಉಪಾಧ್ಯಾಯ |
| ಪರೋಪಕಾರಿ | - | ಪರ + ಉಪಕಾರಿ |
| ಸಹೋದ್ಯೋಗಿ | - | ಸಹ + ಉದ್ಯೋಗಿ |

ಇಲ್ಲಿ ಅ, ಆ ಗಳ ಮುಂದೆ ಇ, ಈ ಬಂದಾಗ ಏ ಕಾರವೂ ಉ, ಊ ಬಂದಾಗ ಓ ಕಾರವೂ ಋ ಬಂದಾಗ ಅರ್ ಎಂಬುದು ಆದೇಶವಾಗಿ ಬರುವ ಸಂಧಿಯೇ ಗುಣಸಂಧಿಯಾಗಿದೆ. ಪಾಠದಲ್ಲಿ ಬಂದಿರುವ ಗುಣಸಂಧಿಯಾಗುವ ಪದಗಳನ್ನು ಗುರುತಿಸಿ ವಿಂಗಡಿಸಿ ಬರೆಯಿರಿ.



**ಪ್ರಶ್ನೆ ತಯಾರಿಸಿರಿ**

ಕೆಳಗೆ ಕೊಡಲಾದ ಗದ್ಯಭಾಗವನ್ನು ಓದಿ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ತಯಾರಿಸಿರಿ.


ಡಾ. ರಾಧಾಕೃಷ್ಣನ್ ಅವರ ಬಹುಮುಖ ಪ್ರತಿಭೆಯನ್ನು ಹತ್ತಿರದಿಂದ ಬಲ್ಲವರಾಗಿದ್ದ ನೆಹರೂ ಅವರು ಇವರನ್ನು ಮಾಸ್ಕೋದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಿದರು. ರಷ್ಯಾದ ಅಧ್ಯಕ್ಷರಾಗಿದ್ದ ಸ್ಟಾಲಿನ್ ಅವರ ಸ್ನೇಹ ಸೌಹಾರ್ದಗಳ ಭೇಟಿ ಫಲಪ್ರದವಾಗಿ ಉಭಯದೇಶಗಳ ಬಾಂಧವ್ಯ ವೃದ್ಧಿಸಿತು. ಇದರಿಂದ ಸಂತಸಗೊಂಡ ನೆಹರೂ ಅವರು ರಾಧಾಕೃಷ್ಣನ್ ಅವರನ್ನು ಮೆಚ್ಚಿ ಪ್ರಶಂಸಿಸಿದರು. ಅನಂತರ ಇವರನ್ನು ಭಾರತದ ಉಪರಾಷ್ಟ್ರಪತಿ ಸ್ಥಾನಕ್ಕೆ ನಾಮನಿರ್ದೇಶನ ಮಾಡಲಾಯಿತು. ಇವರು ಎರಡು ಬಾರಿ ಉಪರಾಷ್ಟ್ರಪತಿಗಳಾಗಿ ರಾಷ್ಟ್ರಕ್ಕೆ ಅನುಪಮ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಹಲವಾರು ರಾಷ್ಟ್ರಗಳಿಗೆ ಭೇಟಿ ನೀಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಸೌಹಾರ್ದವನ್ನು ಕಾಪಾಡುವಲ್ಲಿ ಯಶಸ್ವಿಯಾದರು. ಇವರ ಪ್ರವಾಸದ ಉದ್ದೇಶವು ಭಾರತೀಯ ಜೀವನ, ಸಂಸ್ಕೃತಿ, ಚಿಂತನೆ ಮತ್ತು ಮಾನವ ಧರ್ಮವನ್ನು ಪ್ರಚಾರ ಮಾಡುವುದಾದ್ದರಿಂದ ವಿಶ್ವದ ಬುದ್ಧಿವಂತರ ಮೆಚ್ಚುಗೆ ಗಳಿಸಿದರು. ವಿಶ್ವದೆಲ್ಲೆಡೆಗಳಿಂದ ಶ್ಲಾಘಿಸಲ್ಪಟ್ಟ ಇವರನ್ನು ಪದವಿ ಹಾಗೂ ಹುದ್ದೆ ಅನಾಯಾಸವಾಗಿ ಹಂತಹಂತವಾಗಿ ಅರಸಿ ಬಂದವು. ಉಪರಾಷ್ಟ್ರಪತಿಯ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಅನಂತರ ರಾಷ್ಟ್ರಪತಿ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆಯಾದರು. ಅವರಿಗೆ ಬರುತ್ತಿದ್ದ ಹತ್ತುಸಾವಿರ ರೂಪಾಯಿಗಳ ವೇತನದಲ್ಲಿ ೨೫೦೦ ರೂಪಾಯಿಗಳನ್ನು ಮಾತ್ರ ಪಡೆದು ಉಳಿದ ಹಣವನ್ನು ಪ್ರಧಾನಮಂತ್ರಿಗಳ ಪರಿಹಾರ ನಿಧಿಗೆ ವಂತಿಗೆಯಾಗಿ ನೀಡುತ್ತಿದ್ದರು.

# ಬೇಡಿದಂಗೊಲಿದೀವುದೇ ನೃಪಧರ್ಮ

- ಗದುಗಿನ ನಾರಣಪ್ಪ

**ಕಥಾ ಸಂದರ್ಭ :**

ಕೌರವರೊಡನೆ ಜೂಜಾಡಿ ಸೋತ ಪಾಂಡವರು ವನವಾಸಕ್ಕೆ ತೆರಳುತ್ತಾರೆ. ಈ ಸಂದರ್ಭದಲ್ಲಿ ವನವಾಸದಲ್ಲಿರುವ ಪಾಂಡವರ ಮುಂದೆ ತಮ್ಮ ವೈಭವವನ್ನು ಪ್ರದರ್ಶಿಸಿ ಅವರ ಮನನೋಯಿಸಬೇಕೆಂಬ ದುರುದ್ದೇಶದಿಂದ ದುರ್ಯೋಧನನು ತನ್ನ ಪರಿವಾರದೊಂದಿಗೆ ಕಾನನದ ಕಡೆಗೆ ಘೋಷಯಾತ್ರೆ ಕೈಗೊಳ್ಳುತ್ತಾನೆ. ಅಲ್ಲಿ ಚಿತ್ರಸೇನನೆಂಬ ಗಂಧರ್ವನಿಗೆ ಸೇರಿದ ಕೊಳದಲ್ಲಿ ಕೌರವರು ಜಲಕ್ರೀಡೆಯಾಡುತ್ತಿದ್ದಾಗ ಆತ ಅವರನ್ನು ಆಕ್ಷೇಪಿಸುತ್ತಾನೆ ಪರಿಣಾಮವಾಗಿ ಅವರೊಳಗೆ ಯುದ್ಧ ನಡೆಯುತ್ತದೆ. ಯುದ್ಧದಲ್ಲಿ ಕರ್ಣ, ದುಶ್ಶಾಸನಾದಿಗಳೆಲ್ಲರೂ ಸೋತುಹೋಗುತ್ತಾರೆ. ದುರ್ಯೋಧನನನ್ನು ಗಂಧರ್ವನು ಬಂಧಿಸುತ್ತಾನೆ. ಇದರಿಂದ ದುಃಖಿತಳಾದ ದುರ್ಯೋಧನನ ಮಡದಿ ಭಾನುಮತಿ ದುರ್ಯೋಧನನನ್ನು ಬಿಡಿಸುವ ಉಪಾಯ ಕಾಣದೆ ಆ ಕಾಡಿನಲ್ಲಿದ್ದ ಧರ್ಮರಾಯನಿಗೆ ಮೊರೆಹೊಗುತ್ತಾಳೆ.




ಕೇಳು ಜನಮೇಜಯ ಧರಿತ್ರೀ
ಪಾಲ ಸಿಕ್ಕಿದನತ್ತ ಕುರು ಭೂ
ಪಾಲನದನೇವೇಳುವೆನು ಪಾಳಯದ ಗಜಬಜವ
ಆಳು ನಡೆದುದು ಕಂಡ ಮುಖದಲಿ
ಕೀಳು ಮೇಲೊಂದಾಯ್ತು ಧನಿಕರ
ಪೀಳಿಗೆಯ ಧನ ಸೂರೆವೋದುದು ಕೇರಿ ಕೇರಿಯಲಿ

ಅರಸಿಯರು ಸಖಿಯರು ಕುಮಾರಕ
ರರಸನನುಜರ ಹೆಂಡಿರನಿಬರು
ವೆರಸಿ ಬಂದಳು ಭಾನುಮತಿ ಯಮತನುಜನಾಶ್ರಮಕೆ
ಕರುಣಿ ರಕ್ಷಿಸು ಸೋಮವಂಶೋ
ದ್ಧರಣ ರಕ್ಷಿಸು ಸತ್ಯ ಧರ್ಮದ
ಸಿರಿಯೆ ರಕ್ಷಿಸೆನುತ್ತ ಧೊಪ್ಪನೆ ಬಿದ್ದಳಂಘ್ರಿಯಲಿ
ಖಳರು ಕೌರವರಿಂದು ಸಜ್ಜನ
ಕುಲಶಿರೋಮಣಿ ನೀನು ಕರುಣಾ
ಜಲಧಿ ನಿನಗಪರಾಧಿಗಳು ನಾವಹೆವು ಜಗವರಿಯೆ
ಹುಳಿಗೆ ಹಾಲಳುಕಿದರೆ ಹಾಲಿನ
ಜಲಧಿ ಕೆಡುವುದೆ ಜೀಯ ನಿನ್ನವ
ರೆಳಸಿ ಕೊಂಡರು ಕಾಯಬೇಕೆಂದೊರಲಿದಳು ತರಳೆ
ಚುಂಬಿಸಿತು ಕಡುಶೋಕ ಮಿಡಿದನು
ಕಂಬನಿಯನುಗುರಿನಲಿ ಘನ ಕರು
ಣಾಂಬುನಿಧಿ ಸೀಗುರಿಸಿ ಮೈಗೂಡಿರಿದ ರೋಮದಲಿ
ಹಂಬಲಿಸಬೇಡಕಟ ಕುರುಪತಿ
ಯೆಂಬನಾರೌ ಬೊಪ್ಪನವರೇ
ನೆಂಬರೇಳೌ ತಾಯೆಯೆನುತೆತ್ತಿದನು ಭಾಮಿನಿಯ
ಭೀಮ ಬಾ ಕುರುರಾಜಕುಲ ಚೂ
ಡಾಮಣಿಯೆ ತಾ ಹೋಗು ಕದನೋ
ದ್ಧಾಮ ದರ್ಪನ ತಾ ನಿಜಾನ್ವಯ ಕುಮುದ ಚಂದ್ರಮನ
ತಾ ಮನೋವ್ಯಥೆ ಬೇಡ ನೃಪ ಚಿಂ
ತಾಮಣಿಯ ತಾಯೆನಲು ಕರಯುಗ
ತಾಮರಸವನು ಮುಗಿದು ಬಿನ್ನಹ ಮಾಡಿದನು ಭೀಮ
ತಮ್ಮ ಸಂಕಟಕಿವರು ವಿನಯವ
ನೆಮ್ಮಿ ಬಿನ್ನಹ ಮಾಡುತಿರ್ದೊಡೆ
ನಿಮ್ಮಡಿಗೆ ಪರಿತೋಷವೇ ಕರ್ತವ್ಯ ವಿಷಯದಲಿ
ಎಮ್ಮ ಮನ ಮುಂಚುವುದು ಕಾರ್ಯದ
ಹಮ್ಮುಗೆಯ ನೀವರಿಯಿರೇ ತಮ
ತಮ್ಮ ದುಷ್ಕೃತ ತಮಗೆ ಫಲಿಸಿದರೇನು ನಿಮಗೆಂದ
ಅನುಜಕೇಳಪಕಾರಿ ಜನದಲಿ
ನೆನೆವುದುಪಕಾರವನು ಗುಣ ಹೀ
ನನಲಿ ಗುಣವನು ತೋರುವದು ಗರುವರಿಗೆ ತೊಡಿಗೆಯಿದು
ಅನುಜನಲ್ಲಾ ನಮಗೆ ಕೌರವ
ಜನಪನವರಪರಾಧ ಶತವನು
ನೆನೆವೊಡಿದು ಹೊತ್ತೇ ಮಹಾದೇವೆಂದನಾ ಭೂಪ

ಭರತ ವಂಶದೊಳವರ ಭಂಗವೆ
ನಿರುತವೆಮ್ಮದು ನಮ್ಮ ಭಂಗ
ಸ್ಫುರಣವವರದು ತಾವರಿಯರಾವರಿವೆವೀ ಹದನ
ಪರರ ಕಲಹಕೆ ನಾವು ನೂರೈ
ವರುಗಳಂತಃಕಲಹಕದು ನೂ
ರ್ವರು ವಿಚಾರಿಸಲೈವರಾವೆಂದನು ಮಹೀಪಾಲ
ಆವನಾಗಲಿ ಬೇಡಿದಂಗೊಲಿ
ದೀವುದೇ ನೃಪಧರ್ಮ ಹಗೆ ಕೆಳೆ
ಯಾವನಾಗಲಿ ಸೆಣಸಿದೊಡೆ ಕಾದುವದೆ ನೃಪನೀತಿ
ಆವನಾಗಲಿ ಶರಣುವೊಕ್ಕರೆ
ಕಾವುದೇ ಕ್ಷತ್ರಿಯರ ಮತವಿಂ
ತಾವುದುಚಿತವು ಭೀಮ ನೀ ಹೇಳೆಂದನಾ ಭೂಪ
ಆರಿಗಾರುಪಕಾರಿಗಳು ಮೇ
ಣಾರಿಗಾರಪಕಾರಿಗಳು ತಾ
ನಾರಿಗಾರುಂಟವರವರ ಕೃತಕರ್ಮ ಸಂಸ್ಕಾರ
ಹೋರಿಸುವುದಳಿಸುವುದು ಸೌಖ್ಯಕೆ
ಸೇರಿಸುವುದಿದಕಹಿತ ಹಿತರೆಂ
ದಾರ ಮುರಿವುದು ಮನ್ನಿಸುವುದೈ ಭೀಮ ಹೇಳೆಂದ

## ಕವಿಪರಿಚಯ



**ಗದುಗಿನ ನಾರಣಪ್ಪ** ನಡುಗನ್ನಡ ಸಾಹಿತ್ಯದ ಜನಪ್ರಿಯ ಕವಿ. ಗದುಗು ತಾಲೂಕಿನ ಕೋಳಿವಾಡ ಈತನ ಹುಟ್ಟೂರು. ಸಂಸ್ಕೃತದಲ್ಲಿ ವ್ಯಾಸ ಮಹರ್ಷಿಗಳು ಬರೆದ ಭಾರತವನ್ನು ಇವನು ಕನ್ನಡದಲ್ಲಿ ಭಾಮಿನಿ ಷಟ್ಪದಿಯಲ್ಲಿ ರಚಿಸಿ, ಕುಮಾರವ್ಯಾಸ ಎಂದು ಹೆಸರು ಗಳಿಸಿದನು. ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂದೂ ಪ್ರಸಿದ್ಧವಾದ ಈತನ ಈ ಕೃತಿಯಲ್ಲಿ ರೂಪಕ ಅಲಂಕಾರವನ್ನೇ ಹೆಚ್ಚು ಬಳಸಿಕೊಂಡುದರಿಂದ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದೇ ಇವನು ಪ್ರಸಿದ್ಧನಾಗಿದ್ದಾನೆ.

ಈತನು ಬರೆದ 'ಕರ್ಣಾಟ ಭಾರತ ಕಥಾಮಂಜರಿ'ಯ ಅರಣ್ಯಪರ್ವದಿಂದ ಈ ಭಾಗವನ್ನು ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಭಾನುಮತಿ ಧರ್ಮರಾಯನ ಆಶ್ರಮಕ್ಕೆ ಬರಲು ಕಾರಣವೇನು?
2. ಭಾನುಮತಿಯು ಧರ್ಮರಾಯನಲ್ಲಿ ಏನೆಂದು ಬೇಡಿಕೊಂಡಳು?
3. ಧರ್ಮರಾಯನು ಭೀಮನಲ್ಲಿ ಹೇಳಿದ ನೃಪನೀತಿ ಯಾವುದು?

## ಪದ ವಿಂಗಡಿಸಿರಿ

ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ.

ಉದಾ : ಕಂಬನಿಯನುಗುರಿನಲಿ - ಕಂಬನಿಯನು + ಉಗುರಿನಲಿ

ಕಾಯಬೇಕೆಂದೊರಲಿದಳು - ಕಾಯಬೇಕು + ಎಂದು + ಒರಲಿದಳು

- ಬಿದ್ದಳಂಘ್ರಿಯಲಿ -
- ನಿನಗಪರಾಧಿಗಳು
- ಕರುಣಾಂಬುನಿಧಿ
- ಶರಣುವೊಕ್ಕರೆ
- ಬೇಡಿದಂಗೊಲಿದೀವುದೇ
- ಕುಮಾರಕರರಸನನುಜರ

## ಸ್ವಾರಸ್ಯ ಬರೆಯಿರಿ

1. ಹುಳಿಗೆ ಹಾಲಳುಕಿದರೆ ಹಾಲಿನ ಜಲಧಿ ಕೆಡುವುದೆ.
2. ಪರರ ಕಲಹಕೆ ನಾವು ನೂರೈವರುಗಳು ಅಂತಃಕಲಹಕದು ನೂರ್ವರು.

## ಪ್ರಬಂಧ ಬರೆಯಿರಿ

- ಒಗ್ಗಟ್ಟಿನಿಂದ ವಿಕಾಸ, ಬಿಕ್ಕಟ್ಟಿನಿಂದ ವಿನಾಶ - ಈ ವಿಚಾರದ ಕುರಿತು ಪ್ರಬಂಧ ಬರೆಯಿರಿ.

## ವಾಚನ - ವ್ಯಾಖ್ಯಾನ ಮಾಡಿರಿ

- ಈ ಕಾವ್ಯಭಾಗವನ್ನು ತರಗತಿಯಲ್ಲಿ ವಾಚಿಸಿ, ವ್ಯಾಖ್ಯಾನ ಮಾಡಿರಿ.

## ಸಮಾಸ ಗುರುತಿಸಿರಿ

ಕೋಟೆಯ ಹೊರಪ್ರದೇಶದಲ್ಲಿ ಹರಿಯುವ ಕಾಲುವೆ, ದನಮೇಯಿಸುವ ಹುಡುಗರ ಹಾಡು, ದೂರದಲ್ಲಿರುವ ಪರ್ವತಸಾಲು ಎಲ್ಲವೂ ಮನಮೋಹಕವಾಗಿ ಅವರಿಗೆ ತೋರಿದವು.

ಮೇಲಿನ ವಾಕ್ಯದಲ್ಲಿ ಅಡಿಗೆರೆ ಎಳೆದ ಪದಗಳನ್ನು ಈ ರೀತಿಯಲ್ಲಿ ವಿಗ್ರಹಿಸಿ ಬರೆಯಬಹುದು.

- ಹೊರಪ್ರದೇಶ - ಹೊರಗಿನ ಪ್ರದೇಶ
- ಪರ್ವತಸಾಲು - ಪರ್ವತಗಳ ಸಾಲು
- ಮನಮೋಹಕ - ಮನಸ್ಸಿಗೆ ಮೋಹಕ

ಈ ರೀತಿಯಲ್ಲಿ ವಿಗ್ರಹಿಸಿ ಬರೆಯಬಹುದಾದ ಸಮಾಸವನ್ನು ತತ್ಪುರುಷ ಸಮಾಸ ಎಂದು ಹೇಳುತ್ತಾರೆ. ಈ ಸಮಾಸದಲ್ಲಿ ಕೂಡುವ ಎರಡು ಪದಗಳೂ ನಾಮಪದಗಳಾಗಿರುತ್ತವೆ.

ಈ ಕಾವ್ಯಭಾಗದಲ್ಲಿ ಬಂದಿರುವ ತತ್ಪುರುಷ ಸಮಾಸವಾಗುವ ಪದಗಳನ್ನು ಗುರುತಿಸಿ ವಿಗ್ರಹವಾಕ್ಯ ಬರೆಯಿರಿ.

## ಛಂದಸ್ಸು ಗುರುತಿಸಿರಿ

ಕೆಳಗೆ ಕೊಡಲಾದ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸನ್ನು ಗುರುತಿಸಿರಿ.

ಅರಸಿಯರು ಸಖಿಯರು ಕುಮಾರಕ
ರರಸನನುಜರ ಹೆಂಡಿರನಿಬರು
ವೆರಸಿ ಬಂದಳು ಭಾನುಮತಿ ಯಮತನುಜನಾಶ್ರಮಕೆ
ಕರುಣಿ ರಕ್ಷಿಸು ಸೋಮವಂಶೋ
ದ್ಧರಣ ರಕ್ಷಿಸು ಸತ್ಯ ಧರ್ಮದ
ಸಿರಿಯೆ ರಕ್ಷಿಸೆನುತ್ತ ಧೊಪ್ಪನೆ ಬಿದ್ದಳಂಘ್ರಿಯಲಿ



## ಅಲಂಕಾರ ಗುರುತಿಸಿರಿ

ಉಪಮಾಲಂಕಾರವೆಂದರೇನೆಂಬುದನ್ನು ನೀವು ಈಗಾಗಲೇ ತಿಳಿದಿರುವಿರಿ. ಕೆಳಗೆ ಕೆಲವು ವಾಕ್ಯಗಳನ್ನು ಕೊಡಲಾಗಿದೆ.

ವಿದುರನು ಕೃಷ್ಣನ ಪಾದಪಂಕಜಕ್ಕೆ ನಮಿಸಿದನು
ಕೌರವವಾರಿಧಿಯ ಮುಕ್ಕಳಿಸಲು ಮನುಜವೇಷದಲ್ಲಿ ಕೃಷ್ಣನು ಬಂದನು.

ಮೊದಲವಾಕ್ಯದಲ್ಲಿ ಪಂಕಜದಂತಿರುವ ಪಾದ ಎಂದು ಹೇಳದೆ ಪಾದವನ್ನೇ ಪಂಕಜ ಎಂಬುದಾಗಿ ಹೇಳಲಾಗಿದೆ. ಎರಡನೇ ವಾಕ್ಯದಲ್ಲಿ ವಾರಿಧಿಯಂತಿರುವ ಕೌರವರು ಎನ್ನದೆ ಕೌರವರನ್ನೇ ವಾರಿಧಿ ಎನ್ನಲಾಗಿದೆ.

ಈ ರೀತಿಯಾಗಿ ಒಂದು ಮತ್ತೊಂದೇ ಎಂಬುದಾಗಿ ವರ್ಣಿಸುವುದನ್ನು ರೂಪಕಾಲಂಕಾರ ಎನ್ನುತ್ತಾರೆ.

ಈ ಕಾವ್ಯ ಭಾಗದಲ್ಲಿ ರೂಪಕಾಲಂಕಾರವಾಗುವ ಪದಗಳನ್ನು ಗುರುತಿಸಿ ಬರೆಯಿರಿ.



## ವಾಕ್ಯ ಬರೆಯಿರಿ


ಕೆಳಗಿನ ವಾಕ್ಯಗಳನ್ನು ಗಮನಿಸಿರಿ.

| ಅ | ಆ | ಇ |
|---|---|---|
| ಅಜ್ಞಾನಿಗಳು | ಜಗಳವನ್ನು | ಮಾಡುತ್ತಾರೆ |
| ಸಜ್ಜನರು | ಸತ್ಯವನ್ನೇ | ಹೇಳುತ್ತಾರೆ |
| ಕವಿಗಳು | ಕಾವ್ಯಗಳನ್ನು | ರಚಿಸುತ್ತಾರೆ |

ಮೇಲಿನ ವಾಕ್ಯಗಳಲ್ಲಿ ಅ ವಿಭಾಗದ ಪದಗಳನ್ನು ಕರ್ತೃಪದ ಎನ್ನುತ್ತಾರೆ. ಕರ್ತೃಪದವು ಕ್ರಿಯೆಮಾಡುವವನನ್ನು ಸೂಚಿಸುತ್ತದೆ. ಆ ವಿಭಾಗದ ಪದಗಳನ್ನು ಕರ್ಮಪದವೆನ್ನುತ್ತಾರೆ. ಯಾವ ಕೆಲಸವನ್ನು ಮಾಡುತ್ತಾರೆ ಎಂಬುದನ್ನು ಕರ್ಮಪದವು ಸೂಚಿಸುತ್ತದೆ. ಇ ವಿಭಾಗದ ಪದಗಳನ್ನು ಕ್ರಿಯಾಪದ ಎನ್ನುತ್ತಾರೆ. ಕರ್ತೃ ಮಾಡುವ ಕೆಲಸವನ್ನು ಸೂಚಿಸುವ ಪದವೇ ಕ್ರಿಯಾಪದ.

ಕೆಳಗಿನ ವಾಕ್ಯಗಳಲ್ಲಿರುವ ಕರ್ತೃ, ಕರ್ಮ ಮತ್ತು ಕ್ರಿಯಾಪದಗಳನ್ನು ಪ್ರತ್ಯೇಕಿಸಿ ಬರೆಯಿರಿ.

- ದೊರೆಯು ಮಾರನನ್ನು ಓಡಿಸಿದನು.
- ಅಜ್ಜನವರು ಕಟ್ಟುಕತೆಗಳನ್ನು ಹೇಳುತ್ತಾರೆ.
- ಮಾರಣಾಂತಿಕರೋಗಗಳು ಮನುಕುಲವನ್ನು ಕಾಡುತ್ತವೆ.



# ಘಟಕ–5

# ಸಮನ್ವಯ

# ಮತಸೌಹಾರ್ದ

ಸೆ. 2, ವಡೋದರ : ಕಳೆದ ನಾಲ್ಕು ವರ್ಷಗಳಿಂದ ಗಣೇಶೋತ್ಸವವನ್ನು ಆಚರಿಸುತ್ತಿರುವ ಮುಸ್ಲಿಂ ಕುಟುಂಬವೊಂದು ಮತಸೌಹಾರ್ದವನ್ನು ಎತ್ತಿ ಹಿಡಿದಿದೆ. ಹನೀಫ್ ಕೊರೇಷಿ, ಅವರ ಪತ್ನಿ ಮತ್ತು ಮೂರು ಮಂದಿ ಮಕ್ಕಳು ಗಣೇಶ ದೇವರಿಗೆ ಪೂಜೆ ಸಲ್ಲಿಸುತ್ತಿದ್ದು; ಈ ಪೂಜೆ ತಮಗೆ ಸಂತೋಷ ಮತ್ತು ಸಮೃದ್ಧಿಯನ್ನು ನೀಡಿದೆ ಎಂದು ತಿಳಿಸಿದ್ದಾರೆ.

ನ. 3, ನವದೆಹಲಿ: ದೆಹಲಿಯ ತ್ರಿಲೋಕಪುರಿಯಲ್ಲಿ ಹಿಂದುಗಳು ಮುಸ್ಲಿಂ ಹಬ್ಬವಾದ ಮೊಹರಂ ಮೆರವಣಿಗೆಯ ನೇತೃತ್ವವನ್ನು ವಹಿಸಿರುವುದು ಮತಸೌಹಾರ್ದದ ದ್ಯೋತಕವಾಗಿದೆ. ಹಿಂದು ಸ್ವಯಂಸೇವಕರು ಮೆರವಣಿಗೆಯ ನೇತೃತ್ವ ವಹಿಸಿದ್ದು ಮುಸ್ಲಿಂ ಸಮುದಾಯವು ಸಂಭ್ರಮದಿಂದ ಇದನ್ನು ಸ್ವಾಗತಿಸಿದೆ ಎಂದು 'ಅಮಾನ್' ಸಮಿತಿಯ ಸದಸ್ಯರಾಗಿರುವ ಆದಿಕೇಶವನ್ ತಿಳಿಸಿದ್ದಾರೆ.




ಮೇಲಿನ ಪತ್ರಿಕಾವಾರ್ತೆಗಳ ಕುರಿತಾದ ನಿಮ್ಮ ಅನಿಸಿಕೆಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ನಾನೊಂದು ಮರವಾಗಿದ್ದರೆ


- ಮೂಡ್ನಾಕೂಡು ಚಿನ್ನಸ್ವಾಮಿ

**ನಾ**ನೊಂದು ಮರವಾಗಿದ್ದರೆ
ಹಕ್ಕಿ ಗೂಡುಕಟ್ಟುವ ಮುನ್ನ
ಕೇಳುತ್ತಿರಲಿಲ್ಲ ನೀನು ಯಾವ ಕುಲ;
ಬಿಸಿಲು ನನ್ನ ಅಪ್ಪಿಕೊಂಡಾಗ
ನೆರಳಿಗಾಗುತ್ತಿರಲಿಲ್ಲ ಮೈಲಿಗೆ;
ತಂಬೆಲರ ಕೂಡ ಎಲೆಗಳ ಸ್ನೇಹ
ಮಧುರವಾಗಿರುತ್ತಿತ್ತು.

ಮಳೆಹನಿಗಳು ನಾನು ಶ್ವಪಚನೆಂದು
ಹಿಂದೆ ಸರಿಯುತ್ತಿರಲಿಲ್ಲ. ನಾನು
ಬೇರೂರಿ ಕುಡಿಯಿಡುತ್ತಿರುವಾಗ ಭೂದೇವಿ
ಮಡಿ ಮಡಿ ಎಂದು ಓಡುತ್ತಿರಲಿಲ್ಲ.
ಪವಿತ್ರ ಗೋವು ನನ್ನ ತೊಗಟೆಗೆ ತನ್ನ ಮೈ ಉಜ್ಜಿ
ತುರಿಕೆ ತೀರಿಸಿಕೊಳ್ಳುವಾಗ ಅದರ ಅಂಗಾಂಗಗಳಲ್ಲಿ
ಅಡರಿಕೊಂಡ ಮುಕ್ಕೋಟಿ ದೇವತೆಗಳು
ನನ್ನನ್ನು ಮುಟ್ಟಿಸಿಕೊಳ್ಳುತ್ತಿದ್ದರು.



ಯಾರಿಗೆ ಗೊತ್ತು
ನನ್ನ ಅಂತ್ಯಕಾಲದಲ್ಲಿ
ಕಡಿದು ತುಂಡಾದ ಒಣ ಸೀಳೊಂದು
ಹೋಮಾಗ್ನಿಯಲ್ಲಿ ಬೆಂದು
ಪಾವನವಾಗುತ್ತಿತ್ತೇನೊ!
ಅಥವಾ
ಸತ್ಪುರುಷನೊಬ್ಬನ ಹೆಣಕ್ಕೆ ಚಟ್ಟವಾಗಿ
ನಾಲ್ಕು ಜನ ಸಜ್ಜನರ ಹೆಗಲೇರಬಹುದಿತ್ತೇ?



## ಕವಿಪರಿಚಯ

**ಮೂಡ್ನಾಕೂಡು ಚಿನ್ನಸ್ವಾಮಿ** ಅವರು ೨೨-೦೯-೧೯೫೪ರಲ್ಲಿ ಚಾಮರಾಜನಗರದ ಮೂಡ್ನಾಕೂಡು ಎಂಬಲ್ಲಿ ಜನಿಸಿದರು. ಇವರ ತಂದೆ ಬಸವರಾಜಯ್ಯ, ತಾಯಿ ಗೌರಮ್ಮ. ಇವರು ಮೂಡ್ನಾಕೂಡು, ಚಾಮರಾಜನಗರ, ಮೈಸೂರು, ಧಾರವಾಡ ಮೊದಲಾದ ಕಡೆಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ಇವರು ಸಾಹಿತ್ಯ, ರಂಗಭೂಮಿ, ಸಾಂಸ್ಕೃತಿಕ ಹಾಗೂ ಸಮಾಜಸೇವೆ ಮುಂತಾದ ಕ್ಷೇತ್ರಗಳಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಗದಗ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿದ್ದರು.

ಕೊಂಡಿಗಳು ಮತ್ತು ಮುಳ್ಳಬೇಲಿಗಳು, ಗೋಧೂಳಿ, ನಾನೊಂದು ಮರವಾಗಿದ್ದರೆ ಇವು ಇವರ ಕವನ ಸಂಕಲನಗಳು. ಕೆಂಡಮಂಡಲ (ನಾಟಕ) ಭೀಮಾಬೋಯಿ (ವ್ಯಕ್ತಿಚಿತ್ರ) ಹಾಗೂ ಮೋಹದ ದೀಪ (ಕಥೆಗಳು) ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ೨೦೦೯ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಚಿನ್ನಸ್ವಾಮಿಯವರು ಸಂಕಲನದಿಂದ ಸಂಕಲನಕ್ಕೆ ಹೆಜ್ಜೆಯಿಡುತ್ತ ತಮ್ಮದೇ ಆದ ಹೊಸ ಹದವನ್ನು ಕಂಡುಕೊಂಡಿದ್ದಾರೆ. ಪ್ರಸ್ತುತ ಕವನವನ್ನು ಅವರ ನಾನೊಂದು ಮರವಾಗಿದ್ದರೆ ಎಂಬ ಕವನಸಂಕಲನದಿಂದ ಆರಿಸಿಕೊಳ್ಳಲಾಗಿದೆ.



### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ನಾನೊಂದು ಮರವಾಗಿದ್ದರೆ ಏನು ಮಾಡುತ್ತಿರಲಿಲ್ಲ ಎಂದು ಕವಿ ಹೇಳುತ್ತಾರೆ?
2. ಮರದಿಂದ ಗೋವುಗಳಿಗೆ ಆಗುವ ಉಪಕಾರವೇನು?
3. ಮರ ತುಂಡಾಗಿ ಬಿದ್ದಮೇಲೂ ಹೇಗೆ ಪ್ರಯೋಜನಕಾರಿಯಾಗುತ್ತದೆ?



### ಸ್ವಾರಸ್ಯ ಬರೆಯಿರಿ

ಕೆಳಗಿನ ಸಾಲುಗಳ ಸ್ವಾರಸ್ಯ ಬರೆಯಿರಿ.

- ಹಕ್ಕಿ ಗೂಡುಕಟ್ಟುವ ಮುನ್ನ
  ಕೇಳುತ್ತಿರಲಿಲ್ಲ ನೀನು ಯಾವ ಕುಲ;
- ಮಳೆಹನಿಗಳು ನಾನು ಶ್ವಪಚನೆಂದು
  ಹಿಂದೆ ಸರಿಯುತ್ತಿರಲಿಲ್ಲ.



### ಶೀರ್ಷಿಕೆ ನೀಡಿರಿ

- ‘ನಾನೊಂದು ಮರವಾಗಿದ್ದರೆ’ ಕವನಕ್ಕೆ ಸರಿಹೊಂದುವ ಬೇರೊಂದು ಶೀರ್ಷಿಕೆ ನೀಡಿರಿ. ಆ ಶೀರ್ಷಿಕೆ ಯಾಕೆ ಸಮರ್ಪಕವೆಂದು ವಿವರಿಸಿರಿ.



### ಸಂದೇಶ ಬರೆಯಿರಿ

- ‘ನಾನೊಂದು ಮರವಾಗಿದ್ದರೆ’ ಕವನದ ಮೂಲಕ ಕವಿ ನೀಡುವ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.



### ಲೇಖನ ಬರೆಯಿರಿ

- ಸಾಮಾಜಿಕ ಸಾಮರಸ್ಯದ ಅಗತ್ಯದ ಕುರಿತು ಪತ್ರಿಕೆಯ ಓದುಗರ ಓಲೆ ವಿಭಾಗಕ್ಕೆ ಲೇಖನವೊಂದನ್ನು ಬರೆಯಿರಿ.




### ಕವನ ರಚಿಸಿರಿ

ಕೆಳಗೆ ಕೊಡಲಾದ ಗದ್ಯಭಾಗದ ಆಶಯವನ್ನು ಒಳಗೊಂಡಿರುವ ಕವನ ರಚಿಸಿರಿ.

## ನಾನೊಂದು ಹಕ್ಕಿಯಾಗಿದ್ದರೆ....

ನಾನೊಂದು ಹಕ್ಕಿಯಾಗಿದ್ದರೆ ಬಂಧನಗಳಿಲ್ಲದ ವಿಶಾಲವಾದ ಆಕಾಶದಲ್ಲಿ ಹಾರಾಡುತ್ತಿದ್ದೆ. ಸಮೃದ್ಧವಾದ ಸಂಪತ್ತಿರುವ ಕಾಡಿನಲ್ಲಿ ಆಹಾರ ಹುಡುಕಿದರೂ ಅದರ ನೈಜತೆಗೆ ಕುಂದುತರುತ್ತಿರಲಿಲ್ಲ, ಊರೂರು ಸುತ್ತಾಡಿ ವೈವಿಧ್ಯಮಯವಾದ ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುತ್ತಿದ್ದೆ. ನಿದ್ದೆಯಲ್ಲಿದ್ದ ಮಾನವ ಕೋಟಿಗೆ ಮಧುರನಾದದ ಮೂಲಕ ಬೆಳಗಾದುದನ್ನು ತಿಳಿಸುತ್ತಿದ್ದೆ. ಮರದ ಮೂಲೆಯಲ್ಲಿ ಸುಂದರವಾದ ಗೂಡೊಂದನ್ನು ಕಟ್ಟಿ ಮೊಟ್ಟೆಯನ್ನು ಸಲಹುತ್ತಿದ್ದೆ. ಮರಿಗಳಿಗೆ ಗುಟುಕು ಕೊಟ್ಟು ಬೆಳೆಸುತ್ತಿದ್ದೆ, ಇತರರಿಗೆ ಉಪದ್ರ ಮಾಡದೆ ತನ್ನ ಪಾಡಿಗೆ ತಾನಾಯಿತು ಎಂದು ಬದುಕುತ್ತಿದ್ದೆ. ಸಂಜೆ ಕಡಲಲ್ಲಿ ಮುಳುಗುವ ಸೂರ್ಯನನ್ನು ಕಂಡು ಗೂಡಿಗೆ ಸಾಗುವಂತೆ ಬಳಗದವರನ್ನು ಎಚ್ಚರಿಸುತ್ತಿದ್ದೆ. ನಿಶ್ಚಿಂತೆಯಿಂದ ಗೂಡಿನಲ್ಲಿ ಬೆಚ್ಚಗೆ ನಿದ್ರಿಸುತ್ತಿದ್ದೆ.



# ಪಯಣ

- ಮಿರ್ಜಾ ಬಷೀರ್

**ತೇ**ಗೂರು ಎಂಬ ಕುಗ್ರಾಮದ ಅಂಚಿನಲ್ಲಿದ್ದ ಸಣ್ಣ ಗುಡ್ಡದ ಮೇಲೆ ಊರಿನ ಮಸೀದಿ ಇದೆ. ಬೆಳಗಿನ ಐದು ಗಂಟೆಯ ನಮಾಜಿಗೆ ಮೌಜಾನ್ ಸಾಹೇಬರು ಆಜಾನ್ ಕೂಗಿದಾಗ ಇನ್ನೂ ಕತ್ತಲಿತ್ತು. ದೂರಕ್ಕೆ ಮಸೀದಿ ಮತ್ತು ಅದರ ಮಿನಾರುಗಳು ಛಾಯಾಮಾತ್ರವಾಗಿ ಕಾಣುತ್ತಿದ್ದವು. ಸುತ್ತಲಿನ ವಾತಾವರಣವೆಲ್ಲ ಪ್ರಶಾಂತವಾಗಿತ್ತು. ಅಲ್ಲಿ ಬೀಸುತ್ತಿದ್ದ ತಂಗಾಳಿಯು ಮಸೀದಿಗೆ ಬರುವವರಿಗೆ ಅನಿರ್ವಚನೀಯ ಆನಂದವನ್ನು ನೀಡುತ್ತಿತ್ತು.

ಸಾಹುಕಾರರೂ ಜಮಾತಿನ ಮುಖ್ಯಸ್ಥರೂ ಆದ ಹಾಜಿ ಜನಾಬ್ ಮಹಮ್ಮದ್ ಹುಸೇನ್ ಸಾಹೇಬರು ಎಂದಿನಂತೆ ಸಾವಧಾನದಿಂದ ವಜು ಮಾಡಿಕೊಳ್ಳುತ್ತಿದ್ದರು. ಅವರು ಧರ್ಮಭೀರುವೂ ಮೃದುಹೃದಯಿಯೂ ಆಗಿದ್ದರು. ಅವರಿಗೆ ಹೊಲತೋಟಗದ್ದೆಗಳೂ ಒಂದು ಕಿರಾಣಿ ಅಂಗಡಿಯೂ ಲಾರಿಟ್ರಾಕ್ಟರುಗಳೂ ಇದ್ದು ಅವರ ಮನೆಯಲ್ಲಿ ಹತ್ತಾರು ಜನ ಯಾವಾಗಲೂ ಕೆಲಸಕ್ಕಿರುತ್ತಿದ್ದರು. ಇಷ್ಟಿದ್ದರೂ ಹಾಜಿ ಸಾಹೇಬರು ದರ್ಪ ದೌಲತ್ತು ನಡೆಸಿದವರಲ್ಲ. ಅವರು ಊರೊಟ್ಟಿನ ಕೆಲಸ ಕಾರ್ಯಗಳಿಗೆ ಮುಂದಾಳುವೂ ಕೊಡುಗೈ ದಾನಿಯೂ ಆಗಿದ್ದರು. ಆ ಊರಿನಲ್ಲಿ ಅವರೊಬ್ಬರೇ ಹಾಜಿಯಾಗಿದ್ದುದರಿಂದ ಅವರು ಹಾಜಿ ಸಾಹೇಬರೆಂದೇ ಪ್ರಸಿದ್ಧರಾಗಿದ್ದರು.

ಎಲ್ಲರೂ ನಮಾಜಿಗೆ ಸಿದ್ಧತೆ ನಡೆಸುವ ಹೊತ್ತಿಗೆ ಸರಿಯಾಗಿ ಗಡ್ಡಧಾರಿ ಅಪರಿಚಿತನೊಬ್ಬ ನಿಧಾನವಾಗಿ ಎದ್ದು ಅವರ ಕಡೆಗೆ ಬರುತ್ತಿರುವುದು ಮಸೀದಿಯ ಲೈಟಿನ ಬೆಳಕಿನಲ್ಲಿ ಕಾಣಿಸಿತು. ಆಗ ಹಾಜಿ ಸಾಹೇಬರ ಸಮೀಪದಲ್ಲಿದ್ದ ಅಬ್ದುಲ್ಲ 'ಕೌನ್ಬಾ ತೂ?' ಎಂದು ಆಗಂತುಕನಲ್ಲಿ ಪ್ರಶ್ನಿಸಿದ. ಅಪರಿಚಿತ ತಡವರಿಸಿ ಬಾಯ್ಬಿಟ್ಟು 'ಮೇರಾ ನಾಮ್ ಶೇಖ...'ಎಂದು ಹೇಳುವಷ್ಟರಲ್ಲಿ ಆಗಂತುಕನ ಮಾತುಗಳ್ನು ಅರ್ಧಕ್ಕೆ ತುಂಡರಿಸಿ ಅಬ್ದುಲ್ಲ 'ಓಹ್! ಶೇಖ ಸಾಬ್ ಕ್ಯಾ? ಬಹುತ್ ಅಚ್ಛಾ! ಕಿದರ್‌ವಾಲೆ?' ಎಂದು ಪ್ರಶ್ನಿಸಿದ. ಆಗಂತುಕ ಅದಕ್ಕೇನೂ ಉತ್ತರಿಸದೆ ಅನ್ಯಮನಸ್ಕನಾಗಿ ಉಳಿದ. ನಮಾಜು ಪ್ರಾರಂಭವಾಗುವುದರಲ್ಲಿತ್ತು. ಆಗಂತುಕ

ಹಾಜಿ ಸಾಹೇಬರನ್ನು 'ಬಹುತ್ ಭೂಕ್ ಸಾಬ್. ಖಾನೆ ಕುಚ್ ದೇವ್' ಎಂದು ಅಂಗಲಾಚಿದ. ಮಸೀದಿ ಕಿಟಿಕಿಯಿಂದ ಬಂದ ಬೆಳಕು ಅವನ ಮುಖದ ಮೇಲೆ ಬಿದ್ದಿತ್ತು. ಮುಖ ಬತ್ತಿಹೋಗಿತ್ತು. ಕಣ್ಣು ಒಳಸೇರಿದ್ದವು. ತುಟಿ ಒಣಗಿದ್ದು, ಧ್ವನಿ ದುರ್ಬಲವಾಗಿತ್ತು. ಗಡ್ಡಮೀಸೆಗಳೆಲ್ಲ ಯರ್‍ರಾಬಿರ್‍ರಿ ಬೆಳೆದಿದ್ದವು. ಬಟ್ಟೆ ಗಲೀಜಾಗಿತ್ತು. ಅವನು ಮಾತನಾಡದೆ ಹೋಗಿದ್ದರೆ, ಹಾಜಿ ಸಾಹೇಬರು ಅವನನ್ನು ಹುಚ್ಚನೆಂದೇ ಪರಿಗಣಿಸುತ್ತಿದ್ದರು. "ಕಾಯುತ್ತಿರು, ಬೇಗನೆ ಬಂದು ಬಿಡುತ್ತೇನೆ" ಎಂದು ಸನ್ನೆ ಮಾಡಿ ಮಸೀದಿಯೊಳಹೊಕ್ಕರು.

ಹಾಜಿ ಸಾಹೇಬರು ನಮಾಜು ಮುಗಿಸಿ ಹೊರಬಂದು ಶೇಖ್ ಸಾಹೇಬನನ್ನು ಹಿಂಬಾಲಿಸಲು ಹೇಳಿ ಮನೆ ಕಡೆ ನಡೆದರು. ಶೇಖಸಾಬ್ ಅವರ ಹಿಂದೆ ನಡೆದ. ಸ್ವಲ್ಪ ದೂರದಲ್ಲಿ ಹಾಜಿ ಸಾಹೇಬರ ದೊಡ್ಡ ಮನೆಯಿತ್ತು. ಶೇಖಸಾಬನಿಗೆ ಮನೆಯ ಮುಂದಿನ ವಿಶಾಲವಾದ ಜಗಲಿಯ ಮೇಲೆ ಕೂರಲು ಹೇಳಿ ಹಾಜಿ ಸಾಹೇಬರೇ ಒಳಗಿಂದ ತಿನ್ನಲು ರೊಟ್ಟಿಗಳನ್ನು ತಂದು ಕೊಟ್ಟರು. ಎಷ್ಟು ದಿನಗಳಿಂದ ಹಸಿದಿದ್ದನೋ ಎಂಬಂತೆ ಶೇಖಸಾಬ್ ಅತ್ತಿತ್ತ ಗಮನಿಸದೆ ರೊಟ್ಟಿಗಳನ್ನು ತಿನ್ನತೊಡಗಿದ.

ಹಾಜಿ ಸಾಹೇಬರ ಮನೆ ಮುಂದಿನ ಕಟ್ಟೆಯ ಮೇಲೆ ಠಿಕಾಣಿ ಹೂಡಿದ ಶೇಖಸಾಬ್ ಒಂದು ವಾರವಾದರೂ ಬೇರೆಡೆಗೆ ಹೋಗಲಿಲ್ಲ. ಜಾಣನೋ ಕ್ರ್ಯಾಕು ಮನುಷ್ಯನೋ ಹೇಳಲಾಗದಂತಿದ್ದ ಶೇಖಸಾಬ್ ನಿರುಪದ್ರವಿಯೆಂಬುದು ನಿಧಾನಕ್ಕೆ ಎಲ್ಲರಿಗೂ ತಿಳಿಯತೊಡಗಿತು. ಹಾಜಿ ಸಾಹೇಬರಾಗಲಿ, ಅವರ ಮಗ ಭಾಷಾ ಸಾಹೇಬರಾಗಲೀ ಅಥವಾ ಮನೆಯ ಆಳುಮಕ್ಕಳಾಗಲಿ ಏನೇ ಕೆಲಸ ಹೇಳಿದರೂ ಮಾಡತೊಡಗಿದ ಶೇಖಸಾಬ್ ನಿಧಾನಕ್ಕೆ ಎಲ್ಲರ ವಿಶ್ವಾಸ ಗಳಿಸಿಕೊಳ್ಳತೊಡಗಿದ.

ಹಾಜಿ ಸಾಹೇಬರ ಮನೆಗೆ ಬಂದ ಹೊಸತರಲ್ಲಿ ಒಮ್ಮೊಮ್ಮೆ ಮಾತನಾಡಿಕೊಳ್ಳುವುದು, ನಗುವುದು ಇದ್ದಕ್ಕಿದ್ದಂತೆ ಯಾರಬಳಿಯೋ ಮಾತನಾಡುವವನಂತೆ ತಲೆ, ಕೈಕಾಲು ಆಡಿಸುವುದು ಮಾಡುತ್ತಿದ್ದ ಶೇಖಸಾಬ್ ದಿನಗಳು ಉರುಳಿದಂತೆ ಎಲ್ಲವನ್ನೂ ಕಡಿಮೆ ಮಾಡಿದ. ಶೇಖಸಾಬ್ ನಿಧಾನಕ್ಕೆ ಚಟುವಟಿಕೆಯಿಂದಿರತೊಡಗಿದ. ಅದಕ್ಕೆ ಹಾಜಿ ಸಾಹೇಬರು ಮತ್ತು ಮಗ ಭಾಷಾ ಸಾಹೇಬರು ಅವನ ಬಗ್ಗೆ ತೋರುತ್ತಿದ್ದ ಕಾಳಜಿ ಮತ್ತು ದಿನಕ್ಕೆ ಮೂರುಬಾರಿ ದೊರೆಯುತ್ತಿದ್ದ ಪುಷ್ಕಳ ಊಟ ಕಾರಣವಾಗಿತ್ತು. ಕನ್ನಡ ಮತ್ತು ಉರ್ದು ಎರಡೂ ಭಾಷೆಗಳಲ್ಲಿ ಸಲೀಸಾಗಿ ಮಾತಾಡುತ್ತಿದ್ದ. ಶೇಖಸಾಬ್ ಹಾಜಿಸಾಹೇಬರು ಎಷ್ಟೇ ಪ್ರಯತ್ನಿಸಿದರೂ ತನ್ನ ಹಿನ್ನೆಲೆಯನ್ನು ಬಿಟ್ಟುಕೊಡದೆ ಒಗಟಾಗಿಯೇ ಉಳಿದ.

ಮೊದಮೊದಲು ಶೇಖಸಾಬನ ಚಲನವಲನಗಳ ಮೇಲೆ ಕಣ್ಣಿಟ್ಟಿರಲು ಮನೆಮಕ್ಕಳಿಗೆ ಹಾಗೂ ಆಳುಮಕ್ಕಳಿಗೆ ತಾಕೀತು ಮಾಡುತ್ತಿದ್ದ ಹಾಜಿಸಾಹೇಬರಿಗೆ ಅವನು ಮಗುವಿನಷ್ಟೇ ಮುಗ್ಧನೂ ಪ್ರಾಮಾಣಿಕನೂ ಆಗಿದ್ದುದು ಮನದಟ್ಟಾಗುತ್ತಾ ಹೋಯಿತು. ಏನು ಕೆಲಸ ಹೇಳಿದರೂ ಶೇಖಸಾಬ ಬೇಸರವಿಲ್ಲದೆ ಮಾಡುತ್ತಿದ್ದ. ಇಬ್ಬರು ಮಾಡುವ ಕೆಲಸವನ್ನು ಒಬ್ಬನೇ ಮಾಡುತ್ತಿದ್ದ. ಆದರೂ ಹಾಜಿ ಸಾಹೇಬರಿಗೆ ಎರಡು ಸಂಗತಿಗಳು ಕಿರಿಕಿರಿ ಮಾಡುತ್ತಿದ್ದವು. ಬಯಲಾಗದ ಅವನ ಗತಜೀವನದ ಸಂಗತಿ ಮೊದಲನೆಯದಾದರೆ, ಎರಡನೆಯದು ಶೇಖಸಾಬ ಏನು ಮಾಡಿದರೂ ಹಾಜಿ ಸಾಹೇಬರಿಂದ ತನ್ನ ಕೆಲಸಕ್ಕೆ ದುಡ್ಡು ಕಾಸು ತೆಗೆದುಕೊಳ್ಳದಿದ್ದುದು.

ಒಂದು ಸಲ ವೀರಭದ್ರಸ್ವಾಮಿ ಎಂಬವರು ಬಾಷಾಸಾಹೇಬರ ಲಾರಿಯಲ್ಲಿ ಕೊಬ್ಬರಿ ಹಾಕಿಕೊಂಡು ಮಾರ್ಕೆಟ್‌ಗೆ ಹೋಗಿ ಮಾರಿ ಬಂದರು. ವಾಪಸಾಗಿ ಲಾರಿ ಇಳಿದು ಹೊಗುವಾಗ ಲಾರಿಯ ಕ್ಯಾಬಿನ್ ಮೇಲೆ ದುಡ್ಡಿನ ಚೀಲವನ್ನು ಮರೆತು ಬಿಟ್ಟುಹೋದರು. ಆ ದಿನ ತಡರಾತ್ರಿ ವೀರಭದ್ರಸ್ವಾಮಿಯವರು ಗಾಬರಿಯಲ್ಲಿ ಹಾಜಿ ಸಾಹೇಬರ ಮನೆಗೆ ಬಂದು ವಿಷಯ ತಿಳಿಸಿದರು. ಮನೆಮಂದಿಯೆಲ್ಲರೂ ಗಾಬರಿಯಾದರು. ಮನೆಯ ಹೊರಗೆ ಕಟ್ಟೆಯ ಮೇಲೆ ಗೊರಕೆ ಹೊಡೆಯುತ್ತ ಮಲಗಿದ್ದ ಶೇಖಸಾಬನನ್ನು ಎಬ್ಬಿಸಿದಾಗ, ತಲೆದಿಂಬಾಗಿ ಇಟ್ಟುಕೊಂಡಿದ್ದ ಚೀಲವನ್ನು ವೀರಭದ್ರಸ್ವಾಮಿಗೆ ಒಪ್ಪಿಸಿದ.

ವೀರಭದ್ರಸ್ವಾಮಿ 'ಚೀಲ ನಿನಗೆ ಹೇಗೆ ಸಿಕ್ಕಿತು ಶೇಖಸಾಬ?' ಎಂದು ಪ್ರಶ್ನಿಸಿದಾಗ ಶೇಖಸಾಬ್ 'ಇವತ್ತು ರಾತ್ರಿ ಊಟದ ನಂತರ ಮಾಡಲು ಕೆಲಸವೇನೂ ಇರಲಿಲ್ಲ. ಲಾರಿಯ ಕ್ಯಾಬಿನ್ ಕ್ಲೀನ್ ಮಾಡಲು ಲಾರಿ ಏರಿದೆ. ಅಲ್ಲಿತ್ತು ನಿಮ್ಮ ಚೀಲ'

"ಚೀಲದ ಒಳಗೇನಿದೆಯೆಂದು ನೋಡಿದೆಯಾ?" ಎಂದಾಗ ಶೇಖಸಾಬ "ಎಲೆ ಅಡಿಕೆ ಜೊತೆ ಕೊಬ್ಬರಿ ತುಂಡಿದ್ದರೆ ತಿನ್ನಲು ಚೆಂದ. ಚೀಲದಲ್ಲಿ ಕೊಬ್ಬರಿ ಇದ್ದರೆ ತಿನ್ನಬಹುದಿತ್ತು. ಆದರೆ ದುಡ್ಡನ್ನು ಏನು ಮಾಡೋದು? ಹಣವಲ್ಲವೇ? ಮರೆತುಹೋದವರು ಬಂದೇ ಬರುತ್ತಾರೆ ಎಂದು ಚೀಲವನ್ನು ತಲೆದಿಂಬಾಗಿ ಇಟ್ಟುಕೊಂಡು ಮಲಗಿದೆ" ಎಂದನು. ಕಳೆದುಕೊಂಡ ಒಂದು ಲಕ್ಷದಷ್ಟು ಹಣ ಸಿಕ್ಕಿದ್ದಕ್ಕೆ ಖುಷಿಗೊಂಡ ವೀರಭದ್ರಸ್ವಾಮಿಯವರು ಐನೂರರ ಒಂದು ನೋಟನ್ನು ಸಾಬನ ಮುಂದೆ ಹಿಡಿದಾಗ, ಶೇಖಸಾಬ ಅದನ್ನು ಕಣ್ಣೆತ್ತಿಯೂ ನೋಡದೆ ನಿದ್ದೆಯಲ್ಲಿ ಮುಳುಗಿದ. ಈ ಸುದ್ದಿ ಎಲ್ಲ ಕಡೆ ಹಬ್ಬಿತು.

ಬರಬರುತ್ತ ಊರಿನ ಎಲ್ಲ ಮನೆಗಳಲ್ಲಿಯೂ ಶೇಖಸಾಬ್ ಪರಿಚಿತನಾದ. ಮಸೀದಿಯಂತೆ ಗುಡಿಯಲ್ಲಿಯೂ ಶೇಖಸಾಬನೇ! ಮಸೀದಿಯಲ್ಲಿ ಎಷ್ಟು ನಿಷ್ಠೆಯಿಂದ ಕಸಹೊಡೆದು ಊದಿನಕಡ್ಡಿ ಹಚ್ಚಿ ಸಂಭ್ರಮಿಸುತ್ತಿದ್ದನೋ ಅಷ್ಟೇ ಸಂಭ್ರಮ ಗುಡಿಯನ್ನು ಸ್ವಚ್ಛಗೊಳಿಸಿ ದೀಪಗಳಿಗೆ ಎಣ್ಣೆ ಹಾಕುವುದರಲ್ಲಿಯೂ ಶೇಖಸಾಬನಿಗಿತ್ತು.

ಹೀಗಿರುವಾಗ ಹಾಜಿ ಸಾಹೇಬರ ದನಗಳ ಕೊಟ್ಟಿಗೆಯ ದನಕರುಗಳ ಉಸ್ತುವಾರಿಯನ್ನು ಶೇಖಸಾಬನಿಗೆ ನೋಡಬೇಕಾಗಿ ಬಂತು. ಅಲ್ಲಿ ಅವನ ಇನ್ನೊಂದು ಮುಖದ ಪರಿಚಯವಾಯಿತು. ಅದು ಅವನ ಪ್ರಾಣಿಪ್ರೀತಿ. ಶೇಖಸಾಬನು ಪಶುಗಳನ್ನು ಚೆನ್ನಾಗಿ ಆರೈಕೆ ಮಾಡುವುದೇ ಅಲ್ಲದೆ, ಪಶುವೈದ್ಯವನ್ನೂ ಅರಿತಿದ್ದನು. ಪಶುಗಳ ಯಾವುದೇ ಶುಶ್ರೂಷೆ ಮಾಡಿದುದಕ್ಕೆ ಕಿಂಚಿತ್ತೂ ಹಣ ತೆಗೆದುಕೊಳ್ಳುತ್ತಿರಲಿಲ್ಲ. ರೋಗವನ್ನೂ ಶೇಖಸಾಬ ಗುಣಪಡಿಸುತ್ತಿದ್ದನು. ಮರಣಾಂತಿಕ ಸ್ಥಿತಿಯಲ್ಲಿದ್ದ ಮಠದ ಶಂಕರಪ್ಪನವರ ಹಸುವನ್ನು ರಕ್ಷಿಸಿದ ಮೇಲಂತೂ, ಊರಿನೆಲ್ಲ ರೈತರೂ ಪಶುಗಳ ಚಿಕಿತ್ಸೆಗೆ ಶೇಖಸಾಬನನ್ನು ಅವಲಂಬಿಸತೊಡಗಿದರು. ಸುತ್ತಲಿನ ಹತ್ತುಹಳ್ಳಿಗಳಲ್ಲಿಯೂ ಶೇಖಸಾಬನ ಸುದ್ದಿ ಹಬ್ಬಿತ್ತು.

ಒಂದು ದಿನ ಬೆಳಿಗ್ಗೆ ಹಾಜಿಸಾಹೇಬರ ಮನೆಗೆ ಯಾವುದೋ ಗಣತಿಗೆ ಬಂದಿದ್ದ ಆ ಊರಿನ ಮೇಷ್ಟ್ರು ಶೇಖಸಾಬನನ್ನೇ ನೋಡುತ್ತಾ, ಅವನ ವಿಷಯವಾಗಿ ಹಾಜಿಸಾಹೇಬರನ್ನು ಹತ್ತು ಹಲವು ಪ್ರಶ್ನೆಗಳನ್ನು ಕೇಳಿದರು. ಆ ಮೇಷ್ಟ್ರು ಬೇರೆ ಕಡೆಯಿಂದ ವರ್ಗವಾಗಿ ಹೊಸತಾಗಿ ಬಂದಿದ್ದರು. ಮೇಷ್ಟ್ರ ಪ್ರಶ್ನೆಗಳಿಗೆ ಸಾಹೇಬರು ಎಲ್ಲಿಂದಲೋ ಬಂದವನು ನಮ್ಮ ಮನೆಯಲ್ಲಿಯೇ ಇದ್ದಾನೆ ಎಂಬ ಸಮಾಚಾರವನ್ನು ಹೇಳಿ "ದೇವರ ಆಟ ಮೇಷ್ಟ್ರೆ, ಯಾರ ಅನ್ನದ ಋಣ ಎಲ್ಲೈತೋ" ಎಂದು ಮೌನಕ್ಕೆ ಶರಣಾದರು.

ಪವಿತ್ರ ರಂಜಾನ್ ತಿಂಗಳು ಆರಂಭವಾಯಿತು. ಬೆಳಗಿನ ಜಾವದಲ್ಲೇ ಮಕ್ಕಳೂ, ವಯೋವೃದ್ಧರಾದಿಯಾಗಿ ಸಹರ್ ಮಾಡಿ ರೋಜಾ ಕಟ್ಟಿಕೊಂಡರು. ಈ ಸಂಭ್ರಮ ಗಲಾಟೆಯ ಮಧ್ಯೆ 'ಹಾಜಿಸಾಹೇಬರೇ' ಎಂದು ಗಟ್ಟಿಯಾಗಿ ಕರೆಯುವ 'ಅಯ್ಯೋ! ಶೇಖಸಾಬ' ಎಂದು ಗೋಳಿಡುವ ಕೂಗು ಕೇಳಿಬಂತು. ಅದು ಶೇಖಸಾಬನ ಜೊತೆಯಲ್ಲಿಯೇ ಮಲಗುತ್ತಿದ್ದ ಹಾಜಿಸಾಹೇಬರ ಲಾರಿ, ಟ್ರ್ಯಾಕ್ಟರ್‌ನಲ್ಲಿ ಕೆಲಸ ಮಾಡುವ ರುದ್ರ, ಪ್ರಕಾಶ, ಖಾಜ ಮುಂತಾದವರ ಕೂಗಾಗಿತ್ತು. ಏನಾಯಿತೋ ಎಂದು ಹಾಜಿಸಾಹೇಬರು ಕೂಗಿಕೊಳ್ಳುತ್ತ ದೌಡಾಯಿಸಿ ಮಹಡಿಗೆ ಬಂದರು. ಮುಟ್ಟಿ ನೋಡಲಾಗಿ ಶೇಖಸಾಬನ ಮೈ ತಣ್ಣಗಾಗಿತ್ತು. ಎಲ್ಲರೊಂದಿಗೆ ರಾತ್ರಿ ಬಹಳ ಹೊತ್ತು ಮಾತನಾಡುತ್ತಾ ಮಲಗಿದ್ದ ಶೇಖಸಾಬನ ಪ್ರಾಣಪಕ್ಷಿ ಯಾವ ಕ್ಷಣದಲ್ಲಿ ಎತ್ತ ಪಯಣ ಬೆಳೆಸಿತ್ತೋ?

ಊರೆಲ್ಲ ಸುದ್ದಿ ಹಬ್ಬಿತು. ಎಲ್ಲ ಕೇರಿಯ ಎಲ್ಲ ಜನರೂ ದೌಡಾಯಿಸಿ ಬಂದರು. ಶೇಖಸಾಬನ ಹೆಸರು ಹಿಡಿದು ಕೂಗುವವರಿಂದ, ಗುಣಗಾನ ಮಾಡುವವರಿಂದ, ರೋದಿಸುವವರಿಂದ ಹಾಜಿ ಸಾಹೇಬರ ಮನೆ ತುಂಬಿ ನೂಕುನುಗ್ಗಲು ಪ್ರಾರಂಭವಾಯಿತು. ಇದ್ದಕ್ಕಿದ್ದಂತೆ ಊರಿನಲ್ಲಿ ಪ್ರತ್ಯಕ್ಷನಾಗಿ ಊರಿನವನಷ್ಟೆ ಅಲ್ಲ ಮನೆಮನೆಗೆ ಸೇರಿದವನಾದ, ಯಾವ ಜಾತಿ ಧರ್ಮದವನೂ ಅಲ್ಲದ, ಎಲ್ಲ ಜಾತಿ ಧರ್ಮದವನೂ ಆದ ಹಾಗೂ ಜಾತಿ ಧರ್ಮಗಳನ್ನೆಲ್ಲ ಮೀರಿದ ಶೇಖಸಾಬ್‌ನ ಮರಣ ಎಲ್ಲರ ಕಣ್ಣಾಲಿಗಳು ತುಂಬುವಂತೆ ಮಾಡಿತು.

ಅಷ್ಟು ಹೊತ್ತಿಗೆ ಕೆಲವರು ಮಸೀದಿಗೆ ಹೋಗಿ ಡೋಲಿಯನ್ನು ಹೊತ್ತು ತಂದರು. ಕಬರಸ್ಥಾನಕ್ಕೆ ಒಯ್ಯಲು ಡೋಲಿಯನ್ನು ಸಿದ್ಧಪಡಿಸಿ ಮೈಯತ್ತನ್ನು ಡೋಲಿಗೆ ವರ್ಗಾಯಿಸಿದರು. ಚನ್ನಪ್ಪನು ಮುಂದೆ ಬಂದು ಡೋಲಿಗೆ ಕೈಹಾಕಿ "ನೀನ್ಯಾರೋ ಏನೋ ನಮ್ಮಪ್ಪ, ಎಲ್ಲಿಂದ ಬಂದೆ ಅನ್ನೋದ್ನೂ ತಿಳಿಸದೆ ಚಟ್ ಅಂತ ಸತ್ತೋದೆ. ಏನೇನ್ ಮಾಡ್ಬೇಕೋ ಅದೆಲ್ಲ ಮಾಡ್ತೀವಿ. ತಪ್ಪಾಗಿದ್ರೆ ಕ್ಷಮಿಸಪ್ಪ" ಎಂದು ಬಿಕ್ಕುತ್ತ ಡೋಲಿಗೆ ಹೆಗಲುಕೊಟ್ಟ. ಚನ್ನಪ್ಪನ ಪಕ್ಕಕ್ಕೆ ಅಬ್ದುಲ್ಲ ನಿಂತಿದ್ದ. ವಯಸ್ಸಾದ ಕಾರಣ ಡೋಲಿಭಾರವನ್ನು ಹೊರಲಾರದೆ ಹೊತ್ತಿದ್ದರು ವೀರಭದ್ರಸ್ವಾಮಿ. ಇನ್ನೊಂದು ಕಡೆ ಪೇಶ್ ಇಮಾಮರೇ ಡೋಲಿ ಹೊತ್ತು, "ಆರು ತಿಂಗಳು ನನಗೆ ಊಟ ಹೊತ್ತಿದ್ದಾನೆ ಶೇಖಸಾಬ್" ಎಂದು ಹನಿಗಣ್ಣಾದರು. ಒಬ್ಬರಾದ ಮೇಲೆ ಒಬ್ಬರು ಸರದಿಯಂತೆ ಡೋಲಿ ಹೊರುತ್ತ ಕಬರಸ್ಥಾನಕ್ಕೆ ಬಂದರು.

ಡೋಲಿಯನ್ನು ಕಬರಸ್ಥಾನದಲ್ಲಿ ಇಳಿಸಿ, ಇಮಾಮರು ಮುಂದೆ, ಮುಸ್ಲಿಮರು ಸಾಲುಸಾಲಾಗಿ ಹಿಂದೆ ನಿಂತು ನಮಾಜು ಮಾಡಿದರು. ಹಿಂದುಗಳು ಇವರ ಸುತ್ತ ಕೈಕಟ್ಟಿ ನಿಂತಿದ್ದರು. ದುಃಖದಲ್ಲಿ ಮುಳುಗಿದ್ದ ಇವರ ಕಣ್ಣುಗಳ ತುಂಬಿ ಬಂದಿದ್ದವು. ಗಂಟಲು ಭಾರವಾಗಿದ್ದವು. ಮನಸ್ಸುಗಳು ಆರ್ದ್ರವಾಗಿದ್ದವು. ಪೇಶ್ ಇಮಾಮರು ನಮಾಜು ಮುಗಿಸಿ, ಶೇಖಸಾಬನಿಗಾಗಿ ದುವಾ ಮಾಡಿದರು. ಪ್ರತಿಯೊಬ್ಬರೂ ಮೂರು ಬೊಗಸೆ ಮಣ್ಣನ್ನು ಮೈಯತ್ ಮೇಲೆ ಹಾಕಬೇಕೆಂದು ಹೇಳುತ್ತ ಮೈಯತ್ತನ್ನು ಗುಂಡಿಯಲ್ಲಿಳಿಸಲು ಪೇಶ್ ಇಮಾಮರು ಸನ್ನೆ ಮಾಡಿದರು. ಆ ಕ್ಷಣ ದೂರದಲ್ಲಿ ಮೇಷ್ಟ್ರು ಜನರ ಒಂದು ಗುಂಪಿನೊಡನೆ ಬಂದು "ಮುಲ್ಲಾ ಸಾಹೇಬರೇ, ಸ್ವಲ್ಪ ನಿಧಾನಿಸಿ" ಎಂದು ಕೂಗಿಕೊಂಡರು.

ಎಲ್ಲರೂ ಗರಬಡಿದಂತಾದರು. ಮೇಷ್ಟ್ರು ಹತ್ತಿರ ಬಂದವರೆ ತನ್ನ ಜೊತೆ ಇದ್ದವರನ್ನು ತೋರಿಸುತ್ತಾ "ಇವರು ಶಿವಮೊಗ್ಗ ಜಿಲ್ಲೆಯ ಮಲ್ಲಿಗೆ ಹಳ್ಳಿಯವರು. ಇವರ ಊರಿನವನೊಬ್ಬ

ಅಂದರೆ ಇವಳ ತಂದೆ 6-7 ತಿಂಗಳ ಹಿಂದೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಿಂದ ನಾಪತ್ತೆಯಾಗಿದ್ದಾನೆ. ಅವನೊಬ್ಬ ಮಾನಸಿಕ ನೆಮ್ಮದಿ ಕಳೆದುಕೊಂಡ ವ್ಯಕ್ತಿಯಾಗಿದ್ದ. ನಾನು ಯಾವಾಗಲೋ ಒಂದು ಸಲ ಹುಚ್ಚುಹುಚ್ಚಾಗಿ ಆಡುತ್ತಿದ್ದ ಅವನನ್ನು ನೋಡಿದ್ದೆ. ಹಾಜಿ ಸಾಹೇಬರಲ್ಲಿ ಶೇಖಸಾಬನನ್ನು ಕಂಡಾಗ ಅನುಮಾನವಾಯಿತು. ಅವನ ಮನೆಯವರಿಗೆ ವಿಷಯ ತಿಳಿಸಿ, ಮನೆಯವರಿಬ್ಬರನ್ನು, ಮತ್ತಿಬ್ಬರು ಊರಿನ ಹಿರಿಯರನ್ನು ಕರೆದುಕೊಂಡು ಬಂದಿದ್ದೇನೆ. ಈಗ ಅವರೇ ಗುರುತು ಹಿಡಿಯಲಿ. ದಯವಿಟ್ಟು ಸಹಕರಿಸಿ ಸ್ವಾಮಿ" ಎಂದು ಹೇಳುವಷ್ಟರಲ್ಲಿ ಮೇಷ್ಟ್ರ ಜೊತೆ ಬಂದ ಹೆಣ್ಣುಮಗಳು ಶೇಖಸಾಬನ ಮುಖವನ್ನು ನೋಡಿ ಚಿಟ್ಟನೆ ಚೀರಿ ಮೂರ್ಛೆಹೋದಳು.

ತೇಗೂರಿನ ಗ್ರಾಮಸ್ಥರಿಗೂ ದಿಗ್ಭ್ರಮೆಯಾಯಿತು. ಮುಖಕ್ಕೆ ನೀರು ಚಿಮುಕಿಸಿದ ಮೇಲೆ ಎದ್ದು ಕೂತ ಹೆಣ್ಣುಮಗಳು, "ನಾನು ಸಾವಂತ್ರಿ ಅಂತ. ನೀವೇಳ್ತಾ ಇರೋ ಇವರು ಶೇಖಸಾಬ್ ಅಲ್ಲ. ಇವರ ಹೆಸರು ಶೇಖರಪ್ಪ ಅಂತ. ನಾವು ಮಲ್ಲಿಗೆ ಹಳ್ಳಿಯವರು. ನೀವು ತಿಳ್ಕಂಡಂಗೆ ಸಾಬ್ರಲ್ಲ. ನಾನು ಶೇಖರಪ್ಪನ ಮಗಳು" ಎಂದು ಹೇಳುತ್ತಾ ದುಃಖ ತಾಳಲಾಗದೆ ಅಳತೊಡಗಿದಳು.

ಹಾಜಿಸಾಹೇಬರು ಮೊದಲ ದಿನ ಶೇಖಸಾಬನನ್ನು ಕಂಡುದನ್ನು ನೆನಪಿಸಿಕೊಂಡರು. ಆತನ ಹೆಸರನ್ನು ಪೂರಾ ಹೇಳಲು ಬಿಡದೆ ಅಬ್ದುಲ್ಲ ತುಂಡರಿಸಿದುದು ಹಾಜಿ ಸಾಹೇಬರ ಮನಃಪಟಲದಲ್ಲಿ ಹಾದುಹೋಯಿತು. "ನಾಪತ್ತೆಯಾದ ಶೇಖರಪ್ಪನನ್ನು ಹುಡುಕಿ ನಾವು ತುಂಬಾ ಅಲೆದಿದ್ದೇವೆ. ಅವನ ಕನವರಿಕೆಯಲ್ಲೇ ಈಗ ಎರಡು ತಿಂಗಳ ಹಿಂದೆ ಅವನ ಹೆಂಡತಿ ಸತ್ತೋದ್ಲು. ಮೇಷ್ಟ್ರು ಹೇಳಿದ ಬಳಿಕ ಶೇಖರಪ್ಪನನ್ನು ಕರೆದುಕೊಂಡು ಹೋಗಲೆಂದೇ ಬಂದೆವು. ಆದರೆ ದುರಾದೃಷ್ಟ. ಹೋಗ್ಲಿ ಮುಖಾನಾದರೂ ನೋಡಲು ಸಿಗ್ತಲ್ಲ" ಎಂಬುದಾಗಿ ಮಲ್ಲಿಗೆ ಗ್ರಾಮಪಂಚಾಯ್ತಿ ಅಧ್ಯಕ್ಷರು ಹೇಳಿದರು.

ಅಧ್ಯಕ್ಷರ ಪಕ್ಕದಲ್ಲಿ ನಿಂತಿದ್ದ ಸಾವಂತ್ರಿ "ಇನ್ನು ನನ್ನಪ್ಪನ್ನ ನಾವು ಕರ್ಕೊಂಡು ಹೋಗ್ತೀವಿ ಅಪ್ಪಣೆ ಕೊಡ್ರಿ" ಎಂದಳು. ತೇಗೂರು ಗ್ರಾಮಕ್ಕೆ ಗ್ರಾಮವೇ ಅಲ್ಲಿ ನೆರೆದಿತ್ತು. ಮಲ್ಲಿಗೆ ಗ್ರಾಮದವರ ನಿಷ್ಕಪಟತೆ ಅವರಿಗೆ ಅರಿವಾಗಿತ್ತು. ಶೇಖಸಾಬನನ್ನು ಬಿಟ್ಟುಕೊಡಲು ಮನಸ್ಸಿಲ್ಲದಿದ್ದರೂ ನ್ಯಾಯಕ್ಕೆ ತಲೆಬಾಗಿ ಎಲ್ಲರೂ ಒಮ್ಮನಸ್ಸಿನಿಂದ ವಿದಾಯಕ್ಕೆ ಸಮ್ಮತಿಸಿದರು. ಶೇಖರಪ್ಪನ ಪಾರ್ಥಿವ ಶರೀರ, ಸಾವಂತ್ರಿ, ಸಾವಂತ್ರಿಯ ಗಂಡ ಮತ್ತು ಹಲವಾರು ಮಂದಿ ತೇಗೂರಿನವರನ್ನೊಳಗೊಂಡ ಲಾರಿಯೂ, ಹಾಜಿ ಸಾಹೇಬರು ಮತ್ತು ಮಲ್ಲಿಗೆ ಗ್ರಾಮದವರು ಕುಳಿತ ಕಾರೂ ಹೊರಟವು. ಲಾರಿಯಲ್ಲಿ ಮೌನ ಮಡುಗಟ್ಟಿತ್ತು.


ಸಂಜೆ ನಾಲ್ಕರ ಹೊತ್ತಿಗೆ ಮಲ್ಲಿಗೆ ಗ್ರಾಮಕ್ಕೆ ತಲುಪಿದಾಗ ಶೇಖರಪ್ಪನ ಇಬ್ಬರು ಗಂಡುಮಕ್ಕಳು, ಬಂಧುಬಳಗದವರು ಶೇಖರಪ್ಪನ ಬರವನ್ನೇ ಕಾಯುತ್ತಿದ್ದರು. ಶೇಖರಪ್ಪನ ಮೃತಶರೀರ ಕಂಡಾಗ ಎಲ್ಲರೂ ದುಃಖ ಸಹಿಸಲಾಗದೆ ಬಿಕ್ಕಿದರು.

ಶೇಖರಪ್ಪನ ಮನೆಯಿದ್ದ ತೋಟದಲ್ಲಿಯೇ, ಮನೆಯವರ ಮತ್ತು ಹಿರಿಯರ ಸಮ್ಮುಖದಲ್ಲಿ ಶೇಖರಪ್ಪನ ಶವಸಂಸ್ಕಾರವನ್ನು ಶಾಸ್ತ್ರಸಮ್ಮತವಾಗಿ ಮಾಡಲಾಯಿತು. ಎಲ್ಲರೂ ಭೇದಭಾವ ಇಲ್ಲದೆ ಶೇಖರಪ್ಪನಿಗೆ ಅಂತಿಮ ನಮನ ಸಲ್ಲಿಸಿದರು. ಎಲ್ಲರೂ ದುಃಖದಿಂದಲೂ ಬಳಲಿಕೆಯಿಂದಲೂ ಸೊರಗಿದ್ದರು. ಕತ್ತಲಾವರಿಸತೊಡಗಿದಂತೆ ತೇಗೂರಿನವರು

ಹೊರಡಲಣಿಯಾದರು. ಹಾಜಿ ಸಾಹೇಬರು ಸಾವಂತ್ರಿಯ ಸಮೀಪಕ್ಕೆ ಬಂದು 'ಸಾವಂತ್ರಮ್ಮ, ನಿಮ್ಮಪ್ಪ ಆರು ತಿಂಗಳು ಹಗಲಿರುಳೆನ್ನದೆ ದುಡಿದಿದ್ದಾನೆ. ಆ ಮಹಾರಾಯ ಒಂದು ಪೈಸೆಯನ್ನೂ ಮುಟ್ಟಿಲ್ಲ. ನೀನು ಬೇಡ ಎನ್ನದೆ ಇಸ್ಕೊಬೇಕು' ಎಂದು ಒತ್ತಾಯ ಮಾಡಿ ನೋಟಿನ ಒಂದು ಕಂತೆಯನ್ನು ಅವಳ ಕೈಗಿತ್ತರು.

ಕತ್ತಲಾವರಿಸತೊಡಗಿತು. ರೋಜಾದಾರರು ಸುಸ್ತಾಗಿದ್ದರು. ಶೇಖರಪ್ಪನ ಕಡೆಯವರು ಬಂದವರೆಲ್ಲರಿಗೂ ಉಪ್ಪಿಟ್ಟು, ಚಿತ್ರಾನ್ನ ಸರಬರಾಜು ಮಾಡಿದರು. ರೋಜಾದಾರರೆಲ್ಲ ಅಲ್ಲಿಯೇ ರೋಜಾ ಕೊನೆಗೊಳಿಸಿ ತೋಟದಲ್ಲಿಯೇ ನಮಾಜು ಮಾಡಿದರು. ಬಾಷಾಸಾಹೇಬರು ಎಲ್ಲರಿಗೂ ಲಾರಿ ಹತ್ತಲು ಹೇಳುತ್ತ "ಚನ್ನಪ್ಪಣ್ಣ, ನಾವು ಬೆಳಗಿನ ಜಾವ ಸರಿಯಾಗಿ ಉಂಡಿದ್ವಿ, ಆದ್ರೆ ನೀವು ತಿಂದಿಲ್ಲ ಉಂಡಿಲ್ಲ. ಇಡೀ ದಿನ ಉಪವಾಸ. ನಿಮ್ಮದೇ ನಮ್ಗಿಂತ ದೊಡ್ಡ ರೋಜಾ" ಎಂದರು. ಅದಕ್ಕೆ ಚನ್ನಪ್ಪಣ್ಣ "ಅದಿರ್ಲಿ ನಮ್ಮ ಶೇಖಸಾಬನ... ಅಲ್ಲ ಶೇಖರಪ್ಪನ... ಅವನು ನಮ್ಮೂರಿಗೆ ಶೇಖಸಾಬನೇ ಆಗಿರಲಿ. ಮಲ್ಲಿಗೆಗ್ರಾಮಕ್ಕೆ ಶೇಖರಪ್ಪ ಆಗಿರಲಿ" ಎಂದು ಹೇಳುತ್ತಾ ಲಾರಿ ಹತ್ತಿದನು.

## ಲೇಖಕರ ಪರಿಚಯ



**ಡಾ।। ಮಿರ್ಜಾ ಬಷೀರ್** ಅವರು ದಿನಾಂಕ ೦೧-೦೮-೧೯೫೭ರಂದು ತುಮಕೂರಿನಲ್ಲಿ ಜನಿಸಿದರು. ಇವರ ತಂದೆ ಬಿ.ಕೆ. ಮಹಮ್ಮದ್ ಹುಸೈನ್ ತಾಯಿ ಅಕ್ತರ್ ಜಾನ್. ತನ್ನ ಬಾಲ್ಯದ ವಿದ್ಯಾಭ್ಯಾಸದ ಬಳಿಕ ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಪಿ.ಯು.ಸಿ. ಹಾಗೂ ಪಶುವೈದ್ಯಕೀಯ ಕಾಲೇಜಿನಲ್ಲಿ ಪದವಿಯನ್ನು ಗಳಿಸಿದರು. ಮಹಾರಾಷ್ಟ್ರ ಹಾಗೂ ಕರ್ನಾಟಕದ ಹಲವು ಕಡೆಗಳಲ್ಲಿ ಪಶುವೈದ್ಯವೃತ್ತಿಯನ್ನು ಮಾಡಿ, ಪಶುಪಾಲನ ಇಲಾಖೆಯ ಸಹಾಯಕ ನಿರ್ದೇಶಕರಾಗಿ ದುಡಿದು ಈಗ ಸ್ವಯಂ ನಿವೃತ್ತಿಯನ್ನು ಪಡೆದಿರುವರು.

ಬಾಲ್ಯದಲ್ಲೇ ಶಿವರಾಮಕಾರಂತ, ತ್ರಿವೇಣಿ, ಬೀಚಿ, ಜಿ.ಪಿ. ರಾಜರತ್ನಂ ಮುಂತಾದ ಲೇಖಕರಿಂದ ಪ್ರಭಾವಿತರಾದ ಅವರು ಕಥೆ ಬರೆಯತೊಡಗಿದರು. ಪ್ರಜಾವಾಣಿ, ದೀಪಾವಳಿ, ಕಥಾಸ್ಪರ್ಧೆಗಳಿಗೆ ಕಳುಹಿಸಿದ ಕಥೆಗಳಿಗೆ ಬಹುಮಾನ ಬಂದಾಗ ಪುಳಕಿತರಾದ ಡಾ। ಮಿರ್ಜಾರವರು ಮುಂದೆ ಅನೇಕ ಕಥೆಗಳನ್ನು ಬರೆದರು. ಅವು ಕನ್ನಡದ ವಿವಿಧ ನಿಯತಕಾಲಿಕಗಳಲ್ಲಿ ಪ್ರಕಟಗೊಂಡಿವೆ. ಬಟ್ಟೆಯಿಲ್ಲದ ಊರು ಎಂಬುದು ಅವರ ಪ್ರಕಟಿತ ಚೊಚ್ಚಲ ಕೃತಿ.

### ವಿಶದೀಕರಣ

ವಜುಮಾಡುವುದು - ಮಸೀದಿಯ ಆವರಣದ ಹತ್ತಿರ ಒಂದು ಸಿಮೆಂಟ್ ತೊಟ್ಟಿಯನ್ನು ಕಟ್ಟಿ ಹತ್ತಾರು ನಳ್ಳಿಗಳನ್ನು ಜೋಡಿಸಿರುತ್ತಾರೆ. ಇಲ್ಲಿ ಮುಸ್ಲಿಮರು ಪ್ರಾರ್ಥನೆಯ ಮೊದಲು ಕೈಕಾಲು ಮುಖಗಳನ್ನು ತೊಳೆಯುವ ಕ್ರಿಯೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಹಾಜಿಸಾಹೇಬರಿಗೆ ಕಿರಿಕಿರಿ ಮಾಡುತ್ತಿದ್ದ ಎರಡು ಸಂಗತಿಗಳು ಯಾವುವು?
2. ಶೇಖಸಾಹೇಬರ ಪ್ರಾಮಾಣಿಕತೆಗೆ ನಿದರ್ಶನವೇನು?
3. ಶೇಖಸಾಹೇಬರ ಪ್ರಾಣಿಪ್ರೀತಿ ಹೇಗೆ ಪ್ರಕಟವಾಗುತ್ತಿತ್ತು?
4. ಡೋಲಿಗೆ ಹೆಗಲುಕೊಟ್ಟ ಚೆನ್ನಪ್ಪನು ಏನು ಹೇಳಿದನು?
5. ಶೇಖ ಸಾಹೇಬರ ಶವಸಂಸ್ಕಾರದ ಸಿದ್ಧತೆಯ ಸಂದರ್ಭದಲ್ಲಿ ನಡೆದ ಘಟನೆಯನ್ನು ಬರೆಯಿರಿ.

## ಕ್ರಮೀಕರಿಸಿ ಬರೆಯಿರಿ

- ಕಥೆಯ ಪ್ರಧಾನ ಘಟನೆಗಳನ್ನು ಅನುಕ್ರಮವಾಗಿ ಬರೆಯಿರಿ.

## ಪಾತ್ರಚಿತ್ರಣ ಮಾಡಿರಿ

- 'ಪಯಣ' ಕಥೆಯಲ್ಲಿ ನಿಮಗೆ ಇಷ್ಟವಾದ ಪಾತ್ರದ ಪಾತ್ರಚಿತ್ರಣ ಮಾಡಿರಿ.

## ಪ್ರಬಂಧ ಬರೆಯಿರಿ

- ಮತಸೌಹಾರ್ದವನ್ನು ಉಳಿಸಿಬೆಳೆಸಬೇಕಾದುದರ ಅವಶ್ಯಕತೆಯ ಕುರಿತು ಒಂದು ಪ್ರಬಂಧ ಬರೆಯಿರಿ.

## ಗದ್ಯ ರಚಿಸಿರಿ

ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆಯೆಳೆದ ಪದಗಳನ್ನು ಬಳಸಿಕೊಂಡು ಬೇರೊಂದು ಗದ್ಯಭಾಗ ರಚಿಸಿರಿ.

- ಅಪಘಾತದ ದೃಶ್ಯವನ್ನು ನೋಡಿದ ಮುದುಕನ ಕಣ್ಣಾಲಿಗಳು ತುಂಬಿದವು. ಕ್ಷಣಹೊತ್ತು ಮೌನಕ್ಕೆ ಶರಣಾದ ಆತನ ಮನಃಪಟಲದಲ್ಲಿ ಅಪಘಾತದ ದೃಶ್ಯವು ಹಾದುಹೋಯಿತು.

## ಸಮಾಸ ಗುರುತಿಸಿರಿ

ಹೊಲತೋಟಗದ್ದೆಗಳು ಎಂಬುದನ್ನು ಹೊಲವೂ ತೋಟವೂ ಗದ್ದೆಯೂ ಎಂದೂ ದನಕರುಗಳು ಎಂಬುದನ್ನು ದನವೂ ಕರುವೂ ಎಂದೂ ಬಿಡಿಸಿ ಬರೆಯಬಹುದು. ಇಲ್ಲಿ ನಾಮಪದಗಳು ಸೇರಿ ಸಮಾಸಗಳಾಗಿವೆ. ಹೀಗಿರುವ ಸಮಾಸವನ್ನು ದ್ವಂದ್ವ ಸಮಾಸ ಎನ್ನುತ್ತಾರೆ. ದ್ವಂದ್ವ ಸಮಾಸದಲ್ಲಿ ಎಲ್ಲ ಪದಗಳ ಅರ್ಥವು ಪ್ರಧಾನ. ದ್ವಂದ್ವ ಸಮಾಸವಾಗುವ ಪದಗಳನ್ನು ಪಾಠದಿಂದ ಆರಿಸಿ ವಿಗ್ರಹವಾಕ್ಯ ಬರೆಯಿರಿ.


# ಹರಿಶ್ಚಂದ್ರರಾಯಂ ಸತ್ಯವೆರಸಿ ಬಾಳಲಿ

**- ರಾಘವಾಂಕ**

**ಕಥಾಸಂದರ್ಭ:**

ಸತ್ಯವಾಕ್ಯಪರಿಪಾಲನೆಗಾಗಿ ತನ್ನ ಸರ್ವಸ್ವವನ್ನು ತ್ಯಾಗ ಮಾಡಿದ ಹರಿಶ್ಚಂದ್ರನು ಸತಿಸುತರನ್ನು ವಿಕ್ರಯಿಸುತ್ತಾನೆ. ಅಲ್ಲಿ ಅವನ ಮಗ ಲೋಹಿತಾಶ್ವನು ಕಾಳೋರಗದ ಕಡಿತದಿಂದ ಮರಣವನ್ನಪ್ಪುತ್ತಾನೆ. ಮಗನ ಕಳೇಬರವನ್ನು ಸಂಸ್ಕರಿಸುವ ಸಲುವಾಗಿ ಶ್ಮಶಾನದ ಬಾಡಿಗೆಯನ್ನು ಕೊಡಲಾಗದ ಚಂದ್ರಮತಿಯು ಶ್ಮಶಾನದಲ್ಲಿಯೇ ಮಗನ ಹೆಣವನ್ನು ಬಿಟ್ಟು ಬಾಡಿಗೆ ಹಣದ ಸಂಗ್ರಹಕ್ಕಾಗಿ ತೆರಳುತ್ತಾಳೆ. ಮಾರ್ಗಮಧ್ಯೆ ಕಾಶೀರಾಜನ ಮಗನ ಹೆಣವನ್ನು ಕಂಡು ವ್ಯಾಕುಲತೆಯಿಂದ ತನ್ನ ಮಗನ ಹೆಣವೆಂದೇ ಭ್ರಮಿಸಿ ತಲೆ, ಶರೀರವನ್ನು ತಡವಿ ನೋಡುತ್ತಾಳೆ. ಕಾಶಿರಾಜನ ಮಗನನ್ನು ಕೊಂದ ಅಪರಾಧಿಯನ್ನು ಹುಡುಕುತ್ತ ಬಂದ ರಾಜಭಟರು ಅವಳೇ ಅಪರಾಧಿ ಎಂದು ಭಾವಿಸಿ ಕರೆದೊಯ್ಯುತ್ತಾರೆ. ಪರಿಣಾಮವಾಗಿ ರಾಜನಿಂದ ಮರಣದಂಡನೆಯ ಶಿಕ್ಷೆಗೆ ಒಳಗಾಗುತ್ತಾಳೆ. ರಾಜಭಟರು ಚಂದ್ರಮತಿಯನ್ನು ಶ್ಮಶಾನಕ್ಕೆ ಎಳೆದು ತರುತ್ತಾರೆ. ಅಲ್ಲಿ ಶ್ಮಶಾನ ಕಾಯುತ್ತಿದ್ದ ಹರಿಶ್ಚಂದ್ರನು ಅವಳಾರೆಂದು ತಿಳಿದ ಬಳಿಕವೂ ಕರ್ತವ್ಯ ನಿಷ್ಠೆಯಿಂದ ಅವಳ ತಲೆಕಡಿಯಲು ಸಿದ್ಧನಾಗುತ್ತಾನೆ.

**ಇಂ**ದೆನ್ನ ಕುಲಜನೆನಿಸುವ ಹರಿಶ್ಚಂದ್ರನಂ
ಹೆಂದದ ಚತುರ್ದಶ ಜಗಂಗಳರಿವಂತು ತರು
ಣೇಂದುಧರನಹ ವಿಶ್ವಪತಿ ಮೆರೆವ ಸಂಭ್ರಮದ ಸಡಗರವ ನೋಳ್ಪೆನೆಂದು।
ಕುಂದದುದ್ದವನೇಱಿ ನಿಂದಿಪ್ಪನೋ ಎನಿ
ಪ್ಪಂದದಿಂದುದಯಗಿರಿ ಶಿಖರಕ್ಕೆ ರಾಗದಿಂ
ಬಂದನಂಬುಜಮಿತ್ರನೆಂದೆನಿಪನಪವಿತ್ರತಿಮಿರಪಟಲಾಮಿತ್ರನು ॥




ಹೆಡಗಯ್ಯ ಬಿಗಿದ ನೇಣಂ ಕೊಯ್ದು ಬಿಸುಟು ನಿಡು
ದಡದಲ್ಲಿ ಮೂಡ ಮುಂತಾಗಿ ಕುಳ್ಳಿರಿಸಿ ಹಿಂ
ದಡದಲ್ಲಿ ಕುಸಿದು ನೀಡಡಿಯಿಟ್ಟು ನಿಂದು ಖಡ್ಗವ ಸೆಳೆದು ಜಡಿದು ನೋಡಿ।
ಹೆಡತಲೆಗೆ ಮೋಹಿ ಕಯ್ಯೆತ್ತಿ ಕಂಧರ ಹರೆಯೆ
ಹೊಡೆಯಲನುವಾದೆನನುವಾದೆನನುವಾಗಾಗು
ಮಡದಿ ನೆನೆ ನಿನ್ನ ದೈವವನು ಬಿಡದೆನ್ನೊಡೆಯನಂ ಹರಸು ಹರಸೆಂದನು ॥

ಆ ಹೊಯ್ದನಾಹೊಯ್ದನೆಲೆಲೆ ಶಿವ ಶಿವ ಅಷ್ಟ
ದೇಹಿ ನೀನೇ ಶರಣು ರಕ್ಷಿಸಬಲೆಯನು ದು
ರ್ಮೋಹಿ ವಿಶ್ವಾಮಿತ್ರ ಪಾಪಿ ಇನ್ನಾದೊಡಂ ಸತಿಯ ಕೊಲೆಯಂ ನಿಲಿಸಲು।
ಹೋಹುದೇನೆಂದೋವಿ ಬೇಡಿಕೊಳುತಂ ಸುರ
ವ್ಯೂಹಮಂಬರದಲ್ಲಿ ಹೂಮಳೆಗಳಂ ಹಿಡಿದು
ಮೋಹರಂಬೆತ್ತು ನೋಡುತ್ತಿರಲು ನಾರಿ ಹರಕೆಗಳನವಧರಿಸೆಂದಳು ॥

ಬಲಿದ ಪದ್ಮಾಸನಂ ಮುಗಿದಕ್ಷಿ ಮುಚ್ಚಿದಂ
ಜಲಿವೆರಸಿ ಗುರು ವಸಿಷ್ಠಂಗೆರಗಿ ಶಿವನ ನಿ
ರ್ಮಲ ರೂಪ ನೆನೆದು ಮೇಲಂ ತಿರುಗಿ ನೋಡಿ ಭೂಚಂದ್ರಾರ್ಕತಾರಂಬರಂ ।
ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾ
ಳಲಿ ಮಗಂ ಮುಕ್ತನಾಗಲಿ ಮಂತ್ರಿ ನೆನೆದುದಾ
ಗಲಿ ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾಗಲಿ ಹರಕೆ ಹೊಡೆಯೆಂದಳು ॥


ಹರಕೆಯಂ ಕೇಳಿ ಹವ್ವನೆ ಹಾಱ್ ಬೆರಗಾಗಿ
ಮರವಟ್ಟುನಿಂದು ಭಾಪುರೆ ವಿಧಿಯ ಮುಳಿಸೆ ಹೋ
ದಿರುಳೆನ್ನ ಸುತನ ದುರ್ಮರಣಮಂ ತೋಱ್ ಕಯ್ಯೊಡನೆ ಮತ್ತೀಗಳೆನ್ನ ।
ವರಸತಿಯ ತಲೆಯ ನಾನೆನ್ನ ಕಯ್ಯಾರೆ ಪಿಡಿ
ದರಿವಂತೆ ಮಾಡಿದೆಯಿದಕ್ಕೆ ನಾನಿನಿತು ಹೇ
ವರಿಸುವವನಲ್ಲ ಪತಿಯಾಜ್ಞೆಯುಳಿದಡೆ ಸಾಕೆನುತ್ತ ಕೊಲಲನುವಾದನು ॥

ಮನದ ಶಂಕೆಯನುಳಿದು ಹೊಡೆಯಲನುವಾದ ಭೂ
ಪನ ಭಾವಮಂ ಕಂಡು ಹೊಡೆಯಬೇಡೆನ್ನ ನಂ
ದನೆಯರಂ ಮದುವೆಯಾದಡೆ ಸತ್ತ ಮಗನನೆತ್ತುವೆನಿವಳ ತಲೆಗಾವೆನು ।
ವಿನಯದಿಂ ಕೊಂಡ ಧನಮಂ ಕೊಟ್ಟು ನಿನ್ನ ಬಂ
ಧನ ಮೋಕ್ಷಮಂ ಮಾಡಿ ರಾಜ್ಯಮಂ ಪೊಗಿಸಿ ಮು
ನ್ನಿನ ಪರಿಯಲಿರಿಸುವೆಂ ಕೇಳೆಂದನಂಬರದೊಳಿರ್ದ ವಿಶ್ವಾಮಿತ್ರನು ॥



ತಿರುಗಿ ಮೇಲಂ ನೋಡಿ ಕಂಡಿದೇಂ ಮುನಿ ನಿಮ್ಮ
ಹಿರಿಯತನಕೀ ಮಾತು ಯೋಗ್ಯವೇ ಕೇಳೆನ್ನ
ಸಿರಿ ಪೋದಡೇನು ರಾಜ್ಯಂ ಪೋದಡೇನು ನಾನಾರ ಸಾರ್ದಿರ್ದಡೇನು ।
ವರಪುತ್ರನಸುವಳಿದು ಪೋದಡೇಂ ನಾನೆನ್ನ
ತರುಣಿಯಂ ಕೊಂದಡೇಂ ಕುಂದೆ ಸತ್ಯವನು ಬಿ
ಟ್ಟರನೆನಸಿದಡೆ ಸಾಕು ಎಂದೆತ್ತಿ ಹಿಡಿದ ಖಡ್ಗವ ಜಡಿಯುತಿಂತೆಂದನು ॥

ಹೊಡೆದ ಕಡುಗದ ಬಾಯ ಕಡೆಯ ಹೊಡೆಗಳನಾಂತು
ಮಡದಿಯೆಡೆಗೊರಳ ನಡುವಡಸಿ ಮೂಡಿದನು ಕೆಂ
ಜೆಡೆಯ ಶಶಿಕಳೆಯ ಸುರನದಿಯ ಬಿಸಿಗಣ್ಣ ಫಣಿಕುಂಡಲದ ಪಂಚಮುಖದ ।
ಎಡದ ಗಿರಿಜೆಯ ತಳಿತ ದಶಭುಜದ ಪುಲಿದೊಗಲಿ
ನುಡುಗೆಯ ಮಹಾವಿಷ್ಣುನಯನವೇರಿಸಿದ ಮೆ
ಲ್ಲಡಿಯ ಕಾಶೀರಮಣ ವಿಶ್ವನಾಥಂ ಸುರರ ನೆರವಿ ಜಯಜಯವೆನುತಿರೆ ॥



## ಕವಿಪರಿಚಯ

**ರಾಘವಾಂಕ**ನು ನಡುಗನ್ನಡ ಕಾಲದ ಸುಪ್ರಸಿದ್ಧ ಕವಿಗಳಲ್ಲಿ ಒಬ್ಬ. ಈತನ ಕಾಲ ಹದಿಮೂರನೇ ಶತಮಾನವಾಗಿದ್ದು ಕ್ರಿ.ಶ. ೧೨೨೫ರಿಂದ ೧೩೦೦ರ ವರೆಗೆ ಬದುಕಿದ್ದನೆಂದು ಹೇಳಲಾಗಿದೆ. ಊರು ಹಂಪೆ. ತಂದೆ ಮಹದೇವ, ತಾಯಿ ರುದ್ರಾಣಿ. ಕನ್ನಡದ ಪ್ರಸಿದ್ಧ ಕವಿ ಹರಿಹರ ಈತನ ಸೋದರ ಮಾವ ಮತ್ತು ಗುರು. ಇವನು ಹಂಪೆಯ ವಿರೂಪಾಕ್ಷ ದೇವರ ಪರಮಭಕ್ತನಾಗಿದ್ದ. ಷಟ್ಪದಿ ಛಂದಸ್ಸಿನಲ್ಲಿ ಮೊದಲಿಗೆ ಸಮಗ್ರ ಕಾವ್ಯ ರಚಿಸಿದ ರಾಘವಾಂಕನಿಗೆ ಉಭಯಕವಿಕಮಲರವಿ, ಕವಿಶರಭ ಭೇರುಂಡ ಮುಂತಾದ ಬಿರುದುಗಳಿದ್ದುವು. ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಚಾರಿತ್ರ, ಶರಭ ಚಾರಿತ್ರ, ಸೋಮನಾಥ ಚರಿತೆ, ಹರಿಹರ ಮಹತ್ವ ರಾಘವಾಂಕ ರಚಿಸಿದ ಕಾವ್ಯಗಳಾಗಿವೆ. ಪ್ರಸ್ತುತ ಕಾವ್ಯಭಾಗವನ್ನು 'ಹರಿಶ್ಚಂದ್ರ ಕಾವ್ಯ'ದಿಂದ ಆರಿಸಲಾಗಿದೆ.

### ವಿಶದೀಕರಣ

ಮಹಾವಿಷ್ಣು ನಯನವೇರಿಸಿದ - ಒಮ್ಮೆ ಮಹಾವಿಷ್ಣುವು ಶಿವನಿಗೆ ಸಹಸ್ರಕಮಲಗಳಿಂದ ಅರ್ಚಿಸುತ್ತೇನೆಂದು ಹರಕೆಹೊತ್ತನಂತೆ. ಹಾಗೆ ಅರ್ಚನೆಗೆ ಮುಂದಾದಾಗ ಒಂದು ಹೂವಿನ ಕೊರತೆ ಉಂಟಾಯಿತು. ಆಗ ಕಮಲನಯನನಾದ ವಿಷ್ಣುವು ತನ್ನ ನಯನವನ್ನೇ ಶಿವನಿಗೆ ಅರ್ಪಿಸಿದನು ಎಂಬ ಕತೆಯು ಪುರಾಣದಲ್ಲಿ ಉಲ್ಲೇಖಿಸಲ್ಪಟ್ಟಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಚಂದ್ರಮತಿಯ ಶಿರಚ್ಛೇದನಕ್ಕೆ ಸಿದ್ಧನಾದ ಹರಿಶ್ಚಂದ್ರನು ಅವಳೊಡನೆ ಏನೆಂದನು?
2. ಚಂದ್ರಮತಿಯು ಏನೆಂದು ಪ್ರಾರ್ಥಿಸಿದಳು?
3. ಚಂದ್ರಮತಿಯ ತಲೆಯನ್ನು ಕಡಿಯಲು ಮುಂದಾದ ಹರಿಶ್ಚಂದ್ರನಲ್ಲಿ ವಿಶ್ವಾಮಿತ್ರನು ಏನು ಹೇಳಿದನು?
4. ಕವಿ ಸೂರ್ಯೋದಯವನ್ನು ಹೇಗೆ ವರ್ಣಿಸಿದ್ದಾನೆ?

## ಪದ ವಿಂಗಡಿಸಿರಿ

ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ.

ಉದಾ : ಜಗಂಗಳ್ + ಅರಿವಂತು - ಜಗಂಗಳರಿವಂತು
ತರುಣ + ಇಂದುಧರನ್ + ಅಹ - ತರುಣೇಂದುಧರನಹ
ಹೋಹುದು + ಏನೆಂದು + ಓವಿ - ಹೋಹುದೇನೆಂದೋವಿ

- ಹೊಡೆಯಲನುವಾದೆನನುವಾದೆನನುವಾಗಾಗು
- ಬಿಡದೆನ್ನೊಡೆಯನಂ
- ಮುಚ್ಚಿದಂಜಲಿ
- ಕೇಳೆಂದನಂಬರದೊಳಿರ್ದು
- ಕಂಡಿದೇಂ
- ಪುಲಿದೊಗಲಿನುಡುಗೆಯ

## ಆಶಯ ಬರೆಯಿರಿ

- 'ಹರಿಶ್ಚಂದ್ರರಾಯಂ ಸತ್ಯವೆರಸಿ ಬಾಳಲಿ' ಕಾವ್ಯಭಾಗದ ಆಶಯವನ್ನು ಬರೆಯಿರಿ.

### ಪಾತ್ರಚಿತ್ರಣ ಮಾಡಿರಿ

- ಕಾವ್ಯಭಾಗದ ಆಧಾರದಲ್ಲಿ ಹರಿಶ್ಚಂದ್ರನ ಪಾತ್ರಚಿತ್ರಣ ಮಾಡಿರಿ.
- ಬಲಿದ ಪದ್ಮಾಸನಂ ಮುಗಿದಕ್ಷಿ..................

  ......................................................

  ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾ

  ಳಲಿ ....................................

  ವಿಶ್ವಮಿತ್ರ ನಿತ್ಯನಾಗಲಿ ಹರಕೆ ಹೊಡೆಯೆಂದಳು

  ಚಂದ್ರಮತಿಯ ಪ್ರಾರ್ಥನೆಯಿಂದ ತಿಳಿಯುವ ಅವಳ ಸ್ವಭಾವ ಗುಣಶೀಲಗಳು, ಸನ್ನಡತೆ, ಹಗೆಗಳಲ್ಲಿಯೂ ದಯೆ, ಕರುಣೆ... ಮೊದಲಾದವುಗಳನ್ನು ವಿಶ್ಲೇಷಿಸಿ ಅವಳ ಪಾತ್ರ ಚಿತ್ರಣ ಮಾಡಿರಿ.

### ಸಂಸ್ಕೃತ-ತದ್ಭವ ಗುರುತಿಸಿರಿ

ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ಸಂಸ್ಕೃತರೂಪಗಳನ್ನು ಉಪಯೋಗಿಸಿ ಬೇರೆ ವಾಕ್ಯಗಳನ್ನು ಬರೆಯಿರಿ.

- ಭವ್ಯಳ ಮೊಗವು ಹುಣ್ಣಿಮೆಯ ಸಸಿಯಂತೆ ಶೋಭಿಸುತ್ತಿತ್ತು.
- ಪಯಣದ ಸಂದರ್ಭದಲ್ಲಿ ಹೆಚ್ಚು ಆಹಾರ ಸೇವಿಸಬಾರದು.
- ರಸ್ತೆ ಅಪಘಾತದಲ್ಲಿ ವ್ಯಕ್ತಿಯೊಬ್ಬನ ಹರಣ ಹಾರಿಹೋಯಿತು.
- ಓಡುತ್ತಿರುವ ಹುಡುಗನನ್ನು ಕೈತಟ್ಟಿ ಸನ್ನೆ ಮಾಡಿ ಕರೆದೆನು.

### ಛಂದಸ್ಸು ತಿಳಿಯಿರಿ

ಕೆಳಗೆ ಕೊಡಲಾದ ಪದ್ಯದ ಸಾಲುಗಳಲ್ಲಿರುವ ಅಕ್ಷರಗಳನ್ನು ಲಘುಗುರುಗಳಾಗಿ ಗುರುತಿಸಿರುವುದನ್ನು ಗಮನಿಸಿರಿ. ಪ್ರತಿಯೊಂದು ಸಾಲಿನಲ್ಲೂ ಐದೈದು ಮಾತ್ರೆಗಳ ಗಣಗಳಿವೆ. ಒಂದು ಮತ್ತು ಎರಡನೆಯ ಸಾಲುಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳೂ ಮೂರನೆಯ ಸಾಲಿನಲ್ಲಿ ಆರು ಗಣಗಳೂ ಬರುತ್ತವೆ. ಮೂರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೂ ಅದನ್ನು ಗುರುವಾಗಿ ಗುರುತಿಸಬೇಕು. ಇದು ಒಂದು ಪದ್ಯದ ಅರ್ಧ. ಈ ರೀತಿಯ ಲಕ್ಷಣವಿರುವ ಪೂರ್ಣ ಪದ್ಯವನ್ನು ವಾರ್ಧಕ ಷಟ್ಪದಿ ಎನ್ನುತ್ತಾರೆ.

ಹೆಡಗೆಯ್ಯ|ಬಿಗಿದ ನೇ|ಣಂ ಕೊಯ್ದು|ಬಿಸುಟು ನಿಡು|
ದಡದಲ್ಲಿ| ಮೂಡ ಮುಂ|ತಾಗಿ ಕು|ಳ್ಳಿರಿಸಿ ಹಿಂ|
ದಡದಲ್ಲಿ| ಕುಸಿದು ನೀ|ಡಡಿಯಿಟ್ಟು| ನಿಂದ ಖ|ಡ್ಗವ ಸೆಳೆದು| ಜಡಿದು ನೋ|ಡಿ



## ಪ್ರಸ್ತಾರ ಹಾಕಿರಿ

ಕೆಳಗಿನ ಕಾವ್ಯಭಾಗಗಳಿಗೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿರಿ.

- ಬಲಿದ ಪದ್ಮಾಸನಂ ಮುಗಿದಕ್ಷಿ ಮುಚ್ಚಿದಂ
  ಜಲಿವೆರಸಿ ಗುರು ವಸಿಷ್ಠಂಗೆರಗಿ ಶಿವನ ನಿ
  ರ್ಮಲ ರೂಪ ನೆನೆದು ಮೇಲಂ ತಿರುಗಿ ನೋಡಿ ಭೂಚಂದ್ರಾರ್ಕತಾರಂಬರಂ ।
  ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾ
  ಳಲಿ ಮಗಂ ಮುಕ್ತನಾಗಲಿ ಮಂತ್ರಿ ನೆನೆದುದಾ
  ಗಲಿ ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾಗಲಿ ಹರಕೆ ಹೊಡೆಯೆಂದಳು ॥

- ತಿರುಗಿ ಮೇಲಂ ನೋಡಿ ಕಂಡಿದೇಂ ಮುನಿ ನಿಮ್ಮ
  ಹಿರಿಯತನಕೀ ಮಾತು ಯೋಗ್ಯವೇ ಕೇಳೆನ್ನ
  ಸಿರಿ ಪೋದಡೇನು ರಾಜ್ಯಂ ಪೋದಡೇನು ನಾನಾರ ಸಾರಿರ್ದಡೇನು ।
  ವರಪುತ್ರನಸುವಳಿದು ಪೋದಡೇಂ ನಾನೆನ್ನ
  ತರುಣಿಯಂ ಕೊಂದಡೇಂ ಕುಂದೆ ಸತ್ಯವನು ಬಿ
  ಟ್ಟರನೆನಿಸಿದಡೆ ಸಾಕು ಎಂದೆತ್ತಿ ಹಿಡಿದ ಖಡ್ಗವ ಜಡಿಯುತಿಂತೆಂದನು ॥

# ಅರ್ಥಕೋಶ

## ಅ

| | |
|---|---|
| ಅಂಗುಲಿ | - ಬೆರಳು |
| ಅಂಘ್ರಿ | - ಪಾದ |
| ಅಂತಃಕರಣ | - ಮನಸ್ಸು |
| ಅಂತರಾಳ | - ಒಳಮನಸ್ಸು, ಒಳಗೆ |
| ಅಂಬರ | - ಆಕಾಶ, ಗಗನ |
| ಅಂಬುಜಮಿತ್ರ | - ಕಮಲಬಾಂಧವ, ಸೂರ್ಯ |
| ಅಗ್ಗಿಷ್ಟಿಕೆ | - ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಬಹುದಾದ ಒಲೆ |
| ಅಚ್ಚಳಿ | - ಅಂದಗೆಡು, ರೂಪುಗೆಡು |
| ಅಜಾನ್ | - ಬೆಳಗ್ಗಿನ ಬಾಂಗ್ |
| ಅಜ್ಞಾನ | - ಏನೂ ಗೊತ್ತಿಲ್ಲದಿರುವಿಕೆ, ಬುದ್ಧಿಗೇಡಿತನ |
| ಅಟ್ಟಣಿಗೆ | - ಎತ್ತರವಾದ ವೇದಿಕೆ. |
| ಅಡರು | - ಆವರಿಸಿಕೊಳ್ಳು, ಅಂಟಿಕೊಳ್ಳು |
| ಅತಿಶಯ | - ಶ್ರೇಷ್ಠ, ವಿಪುಲ |
| ಅದ್ದು | - ಮುಳುಗಿಸು |
| ಅನಿಬರು | - ಅಷ್ಟುಮಂದಿ |
| ಅಮರ | - ಶಾಶ್ವತ |
| ಅರಚು | - ಕೂಗಿಕೊಳ್ಳು |
| ಅರಸಿಕ | - ರಸಿಕತೆ ಇಲ್ಲದವ |
| ಅರುಣ | - ಸೂರ್ಯನ ಸಾರಥಿ |
| ಅರುಹು | - ತಿಳಿಸು |
| ಅಲರು | - ವಿಕಾಸಹೊಂದು, ಹೂವು, ಅರಳು |
| ಅಲುಗು | - ಅಲ್ಲಾಡು, ಚಲಿಸು |
| ಅಲೆ | - ತಿರುಗಾಡು, ಸುತ್ತಾಡು, ತೆರೆ |
| ಅಲ್ಪ | - ಸಣ್ಣ |
| ಅವಚು | - ಅಪ್ಪಿಕೊಳ್ಳು |
| ಅವಜ್ಞೆ | - ತಿರಸ್ಕಾರ, ಕಡೆಗಣಿಸುವಿಕೆ, ಅಪಮಾನ |
| ಅಸು | - ಪ್ರಾಣ, ಜೀವ |
| ಅಸ್ತಿವಾರ | - ತಳಹದಿ, ಅಡಿಗಟ್ಟು |
| ಅಳುಕು | - ಹೆದರು |

## ಆ

| | |
|---|---|
| ಆಂದೋಲನ | - ಹೊಯ್ದಾಟ, ಜೋಕಾಲಿ |
| ಆತ್ಮ | - ಜೀವ, ಪ್ರಾಣ |

## ಇ

| | |
|---|---|
| ಇಂಗ್ರೇಜರು | - ಇಂಗ್ಲಿಷರು |
| ಇರುಹೆ | - ಇರುವೆ |
| ಇಲಾಜು | - ಉಪಚಾರ, ಚಿಕಿತ್ಸೆ |

## ಉ

| | |
|---|---|
| ಉದರ | - ಹೊಟ್ಟೆ |
| ಉದ್ದ | - ಎತ್ತರ, ದೀರ್ಘ |
| ಉದ್ದಾಮ | - ಉತ್ತಮ, ಶ್ರೇಷ್ಠ |
| ಉದ್ಧರಣ | - ಉದ್ಧರಿಸಿದುದು |
| ಉದ್ಗ್ರಂಥ | - ಘನವಾದ ಗ್ರಂಥ, ಶ್ರೇಷ್ಠ ಗ್ರಂಥ |
| ಉದ್ಭವಿಸು | - ಹುಟ್ಟಿಕೊಳ್ಳು |
| ಉದ್ಘೋಷ | - ಗಟ್ಟಿಯಾಗಿ ಹೇಳುವುದು |

ಉದ್ಯುಕ್ತ - ತೊಡಗಿದ

ಉಪಹತಿ - ಕೇಡು, ಅಪಾಯ, ಹೊಡೆತ

ಉರುಬು - ಮೇಲೆಬೀಳು, ಏರಿಹೋಗು

ಉಲ್ಲೇಖಿಸು - ವಿವರಿಸು, ಚಿತ್ರಿಸು, ನಮೂದಿಸು

## ಎ

ಎರಕ - ಕಾಯಿಸಿದ ಲೋಹಾದಿಗಳ ದ್ರವವನ್ನು ಅಚ್ಚಿಗೆ ಎರೆಯುವಿಕೆ

ಎರೆ - ಸುರಿ

ಎಲರು - ಗಾಳಿ

ಎಳಸು - ಬಯಸು, ಅಪೇಕ್ಷಿಸು, ಯೋಚಿಸು

## ಏ

ಏನತಪ್ಪ - ಏನು ತಪ್ಪು

## ಐ

ಐಕ್ಯ - ಒಗ್ಗಟ್ಟು, ಒಂದಾಗುವಿಕೆ, ಒಮ್ಮತ

## ಒ

ಒಕ್ಕಲು - ಒಟ್ಟಾಗುವಿಕೆ, ಕುಟುಂಬ, ಮನೆ, ರೈತ

ಒಕ್ಕೊರಲು - ಏಕಕಂಠ

ಒಡಕು - ಬಿರುಕು

ಒಳಬಾಳು - ಅಂತರಂಗದ ಜೀವನ

## ಔ

ಔಟ್‌ಹೌಸ್ - ಹಿತ್ತಿಲ ಮನೆ, ಕೊಟ್ಟಿಗೆ

## ಕ

ಕಂತು - ಮನ್ಮಥ

ಕಂತೆ - ಹೊರೆ, ಕಟ್ಟು, ಚೀಲ

ಕಂದೀಲು - ಲಾಟೀನು, ಮೇಣದ ಬತ್ತಿ

ಕಂಧರ - ಕತ್ತು

ಕಟಕ - ಸೈನ್ಯ

ಕಠೋರ - ಕಠಿಣ, ಕ್ರೂರ

ಕದಡು - ಕಲಕು, ಬೆರೆಸು

ಕನವರಿಸು - ಕನಸಿನಲ್ಲಿ ಮಾತಾಡು, ಕನಸುಕಾಣು

ಕಬರಸ್ಥಾನ - ಶ್ಮಶಾನ

ಕಬಾಬ್ - ಎಣ್ಣೆಯಲ್ಲಿ ಹುರಿದ ಮಾಂಸ

ಕಮರು - ಕುಂದು, ಬತ್ತು, ಬಾಡು

ಕರ್ಮ - ಮಾಡುವ ಕೆಲಸ, ಕರ್ತವ್ಯ

ಕರುಬು - ಅಸೂಯೆಪಡು

ಕವಾಟ - ಬಾಗಿಲು

ಕವೆ - ರೆಂಬೆ, ಸೀಳು, ಕವಲು

ಕಳಲೆ - ಎಳೆಬಿದಿರು, ಬಿದಿರಿನ ಮೊಳಕೆ

ಕ್ಯಾಬಿನ್ - ಸಣ್ಣ ಒಳಕೋಣೆ, ಪೆಟ್ಟಿಗೆ

ಕ್ರ್ಯಾಕು - ಮಾನಸಿಕ ಅಸ್ವಸ್ಥ, ಹುಚ್ಚ

ಕಿಚ್ಚು - ಬೆಂಕಿ

ಕಿನ್ನರ - ದೇವತೆಗಳಲ್ಲಿ ಒಂದು ಜಾತಿ, ಯಾವಾಗಲೂ ಜೊತೆಯಲ್ಲಿರುವವರು

ಕಿರಾಣಿ - ದಿನಸಿ, ಧಾನ್ಯ

ಕೀಳು - ಬೇರು ಸಹಿತ ಹೊರಗೆ ತೆಗೆ

| | |
|---|---|
| ಕುಂಡಲ | - ಕಿವಿಯ ಆಭರಣ |
| ಕುಂತ | - ಕುಳಿತ |
| ಕುಟೀರ | - ಗುಡಿಸಲು, ಸಣ್ಣ ಮನೆ |
| ಕುನಸ | - ದ್ವೇಷ, ಸೇಡು |
| ಕುರಿಗಾಹಿ | - ಕುರಿ ಕಾಯುವವ |
| ಕುರು | - ಕೀವು, ರಕ್ತಗಳಿಂದ ತುಂಬಿದ ಗುಳ್ಳೆ, ಬೊಕ್ಕೆ |
| ಕುರುಹು | - ಗುರುತು |
| ಕುಲಜ | - ಒಳ್ಳೆಯ ಕುಲದಲ್ಲಿ ಹುಟ್ಟಿದವ |
| ಕುಲುಮೆ | - ಕಮ್ಮಾರನ ಒಲೆ |
| ಕುಹಕ | - ಕಪಟ, ಮೋಸ |
| ಕೃತಕರ್ಮಿ | - ಮಾಡಬೇಕಾದ ಕೆಲಸವನ್ನು ಮಾಡಿದವನು |
| ಕ್ಷುದ್ರ | - ಸಣ್ಣ, ಕೀಳು ದರ್ಜೆಯ |
| ಕೂಪ | - ಬಾವಿ, ಹಳ್ಳ |
| ಕೂರಿಗಿ | - ನಾಲ್ಕು ಅಥವಾ ಐದು ಎಕರೆಗಳ ಒಟ್ಟು ಕ್ಷೇತ್ರ |
| ಕೆಂಬೂತ | - ಕೆಂಪು ಕಾಗೆ, ಸಂಬಾರ ಕಾಗೆ, ಕುಪ್ಪುಳು |
| ಕೆಡೆ | - ಬೀಳು |
| ಕೆದಕು | - ಕೆದರು, ನೆಲವನ್ನು ಅಗೆ |
| ಕೇಕೆ | - ಸಂತೋಷದ ಕೂಗು |
| ಕೊಲ್ಗಂಬ | - ಕೊಲ್ಲುವ ಕಂಬ, ನೇಣುಗಂಬ |
| ಕೊಳಾಯಿ | - ನಲ್ಲಿ |

## ಖ

| | |
|---|---|
| ಖಳ | - ನೀಚ, ದುಷ್ಟ |
| ಖಾತ್ರಿ | - ಖಂಡಿತ |
| ಖೋಡಿ | - ನೀಚತನ, ಕೆಟ್ಟವ್ಯಕ್ತಿ, ಅಪರಾಧ |

## ಗ

| | |
|---|---|
| ಗಗನಮುಖಿ | - ಆಕಾಶದತ್ತ ಮುಖ ಮಾಡಿದ, ತುಂಬಾಹೆಚ್ಚಾದ |
| ಗಜಬಜ | - ಗದ್ದಲ, ಗಲಾಟೆ |
| ಗಣಿಸು | - ಲೆಕ್ಕಹಾಕು, ಎಣಿಸು |
| ಗದ್ದುಗೆ | - ಸಿಂಹಾಸನ |
| ಗದ್ನಿ | - ಘರ್ಜನೆ |
| ಗರಿಗರಿ | - ಹೊಸಹೊಸತು |
| ಗರವರು | - ಯೋಗ್ಯರಾದವರು, ದೊಡ್ಡ ಮನುಷ್ಯರು, ಗಣ್ಯವ್ಯಕ್ತಿಗಳು |
| ಗಲ್ಲು | - ನೇಣು |
| ಗಳು | - ಬಿದಿರು ಕೋಲು, ಜೋಳ ಮುಂತಾದವುಗಳ ದೇಟು |
| ಗಾಢಾಲಿಂಗನ | - ಬಿಗಿಯಾದ ಅಪ್ಪುಗೆ |
| ಗಾನ | - ಹಾಡುಗಾರಿಕೆ, ಸಂಗೀತ |
| ಗುಡ್ಡೆ | - ಹೊದೆಯುವ ಬಟ್ಟೆ, ಎತ್ತರದ ಪ್ರದೇಶ |
| ಗೋಣು | - ಕೊರಳು |
| ಗೋಪ್ಯ | - ಗುಟ್ಟು, ರಹಸ್ಯ |

## ಚ

| | |
|---|---|
| ಚಂಣ, ಚಣ್ಣ | - ಚಲ್ಲಣ, ಚಡ್ಡಿ |
| ಚಕ್ಕೆ | - ಕಟ್ಟಿಗೆಯ ಸಿಪ್ಪೆ |
| ಚಕ್ರೇಶ | - ಚಕ್ರವರ್ತಿ, ಅರಸು |
| ಚಟ್ಟ | - ಶವವನ್ನು ಕೊಂಡೊಯ್ಯಲು ಬಳಸುವ ಮರದ ಅಥವಾ ಬಿದಿರಿನ ಹಾಸು |

ಚಳಕ - ಚಮತ್ಕಾರ, ಚಾತುರ್ಯ
ಚಲನಶೀಲ - ಬದಲಾವಣೆಗೆ ಒಗ್ಗಿಕೊಳ್ಳುವ
ಚಾಕರಿ - ಸೇವೆ, ಊಳಿಗ, ನೌಕರಿ
ಚಾವಡಿ - ಹಳ್ಳಿಯಲ್ಲಿ ಪಂಚಾಯತಿ ಸೇರುವ ಸ್ಥಳ, ಗ್ರಾಮ ಕಛೇರಿ, ಮನೆಯ ಮುಂದಿನ ಜಗಲಿ
ಚಿಂದಿ - ಹರಕು ಬಟ್ಟೆ
ಚಿಕ್ಕೆ - ನಕ್ಷತ್ರ
ಚಿನ್ಮೌನ - ಶ್ರೇಷ್ಠವಾದ ಮೌನ, ವಿಶೇಷವಾದ ಮೌನ
ಚೂಡಾಮಣಿ - ಶ್ರೇಷ್ಠ ವ್ಯಕ್ತಿ ಅಥವಾ ವಸ್ತು, ತಲೆಯಲ್ಲಿ ಧರಿಸುವ ರತ್ನದ ಆಭರಣ

## ಛ

ಛಾಯೆ - ನೆರಳು
ಛಾವಣಿ - ಮಾಡು

## ಜ

ಜಟ್ಟಿ - ವೀರಾಳು, ಕುಸ್ತಿ ಮಾಡುವವ
ಜಡಿಯು - ಬಿಗಿಮಾಡು, ಭದ್ರಪಡಿಸು
ಜತನ - ಜಾಗ್ರತೆ, ಜೋಪಾನ
ಜಮಾತು - ನಿರ್ದಿಷ್ಟ ವ್ಯಾಪ್ತಿಗೆ ಒಳಪಟ್ಟ ಮಸೀದಿ
ಜರಡಿ - ಸೋಸುವ ಉಪಕರಣ, ಜಲ್ಲಡಿ, ಜರಡೆ
ಜರೆ - ಬಯ್ಯು, ಹಳಿ, ಮುಪ್ಪು
ಜವ - ಶಕ್ತಿಸಾಮರ್ಥ್ಯ, ವೇಗ, ಯಮ
ಜಾವ - ಯಾಮ, ಏಳೂವರೆ ಗಳಿಗೆಯ ಕಾಲ
ಜೀವಾತ್ಮ - ದೇಹದಲ್ಲಿರುವ ಪರಮಾತ್ಮನ ಅಂಶರೂಪ, ಶಕ್ತಿ
ಜೂಗರಿಸು - ತೂಕಡಿಸು

## ಝ

ಝಳಕ - ಸ್ನಾನ

## ಟ

ಟೆನ್ಶನ್ - ಮಾನಸಿಕ ಉದ್ವೇಗ, ಆತಂಕ
ಟೇರೇಸು - ಮಾಳಿಗೆ, ತಾರಸಿ

## ಡ

ಡೋಲಿ - ಶವವನ್ನಿಟ್ಟು ಹೊತ್ತುಕೊಂಡು ಹೋಗುವ ವಸ್ತು, ಪಲ್ಲಕ್ಕಿ, ಮೇನೆ

## ತ

ತಂಬೆಲರು - ತಂಪಾದ ಗಾಳಿ
ತರಳೆ - ಹುಡುಗಿ, ಯುವತಿ
ತರಿ - ತುಂಡುಮಾಡು, ಚಿವುಟು
ತಲೆಗಾಯು - ರಕ್ಷಿಸು, ಕಾಪಾಡು
ತವಕ - ಆತುರ, ಕಳವಳ
ತಳಕು - ಹೊಳೆಯು, ಮಿನುಗು, ಹೊಳಪು
ತಾಕೀತು - ಕಟ್ಟಪ್ಪಣೆ, ಅಧಿಕಾರಪೂರ್ವಕವಾಗಿ ಕೊಟ್ಟ ಎಚ್ಚರಿಕೆ

| | |
|---|---|
| ತಾಟು | - ತಟ್ಟೆ |
| ತಾಮರಸ | - ತಾವರೆ, ಕಮಲ |
| ತಿದಿ | - ಕುಲುಮೆಯನ್ನು ಉರಿಸುವುದಕ್ಕಾಗಿ ಬಳಸುವ ಗಾಳಿ ತುಂಬಿದ ಚರ್ಮದ ಚೀಲ |
| ತಿಮಿರ | - ಕತ್ತಲೆ |
| ತಿವಿತ | - ಚುಚ್ಚುವಿಕೆ, ಇರಿಯುವಿಕೆ, ಗುದ್ದು |
| ತುಟ್ಟಿ | - ಏರಿದ ಬೆಲೆಯುಳ್ಳ, ಲಭಿಸದೆ ಇರುವ |
| ತುಪ್ಪಳ | - ಮೃದುವಾದ ರೋಮ, ಉಣ್ಣೆ |
| ತೂಗು | - ತೂಗಾಡು |
| ತೃಷೆ | - ಬಾಯಾರಿಕೆ |
| ತೆರೆ | - ಅಲೆ |
| ತೇಪೆ | - ಹರಿದುದನ್ನು ಕೂಡಿಸುವುದಕ್ಕಾಗಿ ಸೇರಿಸಿ ಹೊಲಿದ ತುಂಡು |
| ತೇಯು | - ಸವೆಸು |
| ತೊಲೆ | - ಛಾವಣಿಗೆ ಆಧಾರವಾಗಿ ಗೋಡೆಗಳ ಮೇಲೆ ಅಡ್ಡಲಾಗಿ ಹಾಕುವ ಮರದ ದಿಮ್ಮಿ |
| ತೋಳು | - ಕೈ |

## ದ

| | |
|---|---|
| ದಂತಕಥೆ | - ಕಟ್ಟುಕತೆ |
| ದಗ್ಧ | - ಸುಟ್ಟ |
| ದಾತೆ | - ಕೊಡುವವಳು |
| ದಿಗ್ಭ್ರಮೆ | - ಗಾಬರಿ, ದಿಕ್ಕು ತೋರದಿರುವಿಕೆ |
| ದಿವ್ಯ | - ಪವಿತ್ರ, ನಿರ್ಮಲ |
| ದುಗುಡ | - ದುಃಖ, ಚಿಂತೆ |
| ದುರ್ಗುಣಿ | - ಕೆಟ್ಟ ಗುಣವುಳ್ಳವ |
| ದುಪ್ಪಟ್ಟ | - ಶಾಲು |
| ದುಮ್ಮಾನ | - ಚಿಂತೆ, ದುಃಖ |
| ದುವಾ | - ಪ್ರಾರ್ಥನೆ |
| ದುಷ್ಕೃತ | - ಕೆಟ್ಟಕೆಲಸ ಮಾಡು |
| ದೂರದರ್ಶಿ | - ಮುಂದಾಲೋಚನೆ ಉಳ್ಳವನು |
| ದೌಲತ್ತು | - ಸಿರಿವಂತಿಕೆ, ಸಂಭ್ರಮ, ಭಾಗ್ಯ |
| ದ್ರವ್ಯ | - ಹಣ, ಸಂಪತ್ತು |
| ದ್ರುಮ | - ಗಿಡ, ವೃಕ್ಷ |

## ಧ

| | |
|---|---|
| ಧರಣಿ | - ಭೂಮಿ, ಇಳೆ, ಧರಿತ್ರಿ |

## ನ

| | |
|---|---|
| ನಲವು | - ಹಿಗ್ಗು, ಆನಂದ, ಸಂತೋಷ |
| ನಾಗಾಲೋಟ | - ವೇಗವಾದ ಓಟ, ನಾಲ್ಕು ಕಾಲುಗಳನ್ನು ಒಮ್ಮೆಗೇ ಎತ್ತಿ ಜಿಗಿದು ಓಡುವ ಓಟ |
| ನಾದ | - ಶಬ್ದ, ದನಿ |
| ನಿಡಿದಾದ | - ನೀಳವಾದ, ದೀರ್ಘವಾದ |
| ನಿಡುದಡ | - ಎತ್ತರವಾದ ದಿಣ್ಣೆ |
| ನಿನದ | - ಶಬ್ದ, ದನಿ |

| | | |
|---|---|---|
| ನಿರಪೇಕ್ಷಯೋಗ | - | ಸ್ಥಿತ ಪ್ರಜ್ಞ, ಎಲ್ಲವನ್ನೂ ಸಮಾನವಾಗಿ ಸ್ವೀಕರಿಸುವ ಸ್ಥಿತಿ |
| ನಿರ್ಭರ | - | ವೇಗ, ರಭಸ |
| ನಿರೂಪಿಸು | - | ಹೇಳು |
| ನಿರ್ವೀರ್ಯ | - | ಶಕ್ತಿಕುಂದಿದ, ಬಲಹೀನ |
| ನಿಶೆ | - | ಕತ್ತಲು, ರಾತ್ರಿ |
| ನಿಷ್ಫಲ | - | ಫಲವಿಲ್ಲದ, ವ್ಯರ್ಥ, ಉಪಯೋಗಕ್ಕೆ ಬಾರದ |
| ನಿಸ್ತೇಜ | - | ಕಳೆಗುಂದಿದ, ಬಾಡಿದ |
| ನೀಡಡಿ | - | ದೀರ್ಘವಾದ ಹೆಜ್ಜೆ |
| ನೀರಡಸು | - | ಬಾಯಾರು |
| ನುಣ್ಬೆರಳು | - | ಮೆತ್ತಗಾದ ಬೆರಳು, ನಯವಾದ ಬೆರಳು |
| ನೂತ್ನ | - | ನೂತನ, ಹೊಸ |
| ನೃಪತಿ | - | ರಾಜ, ಅರಸ |
| ನೆಟ್ಟಿ | - | ನೆಟಿಕೆ |
| ನೆಲೆ | - | ಸ್ಥಾನ |
| ನೇಣು | - | ಹಗ್ಗ |
| ನೈಪುಣ್ಯ | - | ಜಾಣತನ, ನಿಪುಣತೆ |

## ಪ

| | | |
|---|---|---|
| ಪಂಕ | - | ಕೆಸರು, ಪಾಪ |
| ಪಂಥ | - | ಪಂಗಡ, ದಾರಿ |
| ಪರವಾನಗಿ | - | ಒಪ್ಪಿಗೆ |
| ಪರತಜ್ಞೆ | - | ಪ್ರತಿಜ್ಞೆ |
| ಪರಿಭವ | - | ತಿರಸ್ಕಾರ, ಸೋಲು, ದುಃಖ |
| ಪಲ್ಲಚ್ಚು | - | ಹಲ್ಲುಕಚ್ಚು |
| ಪಲ್ಲಂಗ | - | ಮಂಚ |
| ಪಾತಿ | - | ಮರಗಿಡಗಳ ಬುಡದಲ್ಲಿ ನೀರು ನಿಲ್ಲಲು ಮಾಡಿರುವ ಕಟ್ಟೆ |
| ಪಾಪಬಂಧ | - | ಪಾಪಪ್ರಜ್ಞೆ |
| ಪಾವನ | - | ಪವಿತ್ರ |
| ಪಾಳಯ | - | ಬೀಡು, ಶಿಬಿರ |
| ಪಿ.ಎಫ್. | - | ಭವಿಷ್ಯನಿಧಿ, ಪ್ರಾವಿಡೆಂಟ್ ಫಂಡ್ |
| ಪಿಕ್‌ಪಾಕೆಟ್ | - | ಕಿಸೆಗಳ್ಳತನ |
| ಪೀಡೆ | - | ನೋವು, ಬಾಧೆ, ಅಡ್ಡಿ, ತಡೆ |
| ಪುಂಡು | - | ದಂಗೆ |
| ಪುದು | - | ಕೂಡು, ಸೇರು |
| ಪುಲಕ | - | ರೋಮಾಂಚನ |
| ಪುಲಕಿತ | - | ರೋಮಾಂಚಿತ, ಮೈನವಿರೆದ್ದ |
| ಪುಷ್ಕಳ ಊಟ | - | ಉತ್ತಮವಾದ ಊಟ, ಹೊಟ್ಟೆ ತುಂಬುವ ಊಟ |
| ಪುಷ್ಟ | - | ಚೆನ್ನಾಗಿ ಬೆಳೆದ, ಶಕ್ತಿಸಂಪನ್ನವಾದ |
| ಪೂಸರಲ್ | - | ಹೂಬಾಣ |
| ಪೆಥಾಲಜಿಸ್ಟ್ | - | ರೋಗ ಪರೀಕ್ಷೆ ತಂತ್ರ ನಡೆಸುವವನು |
| ಪೈಸರ | - | ಜಾರಿಕೆ |
| ಪೊರ್ದು | - | ಹೊಂದು, ಸೇರು |
| ಪೋಣಿಸು | - | ಜೋಡಿಸು, ಸೇರಿಸು, ಮಾಲೆಯನ್ನು ಮಾಡು |

ಪೌಂಡು - ಇಂಗ್ಲೆಂಡಿನಲ್ಲಿ ಚಲಾವಣೆಯಲ್ಲಿರುವ ಹಣ, ನೂರು ಪೆನ್ಸ್‌ಗಳು

ಪೌಜು - ಸೈನ್ಯ

ಪ್ರತಾಪ - ಕಾರ್ಯ, ಸಾಮರ್ಥ್ಯ

ಪ್ರವೃತ್ತಿ - ವರ್ತನೆ, ಚಟುವಟಿಕೆ, ಆಚಾರ

ಪ್ರಸಂಗ - ಸಂದರ್ಭ, ಘಟನೆ, ಸೇರಿಕೆ, ಕೂಟ, ಯಕ್ಷಗಾನಕ್ಕಾಗಿ ಆರಿಸಿಕೊಂಡ ಕಥಾವಸ್ತು

ಪ್ರೇರೇಪಿಸು - ಪ್ರಚೋದಿಸು, ಹುರುಪುಗೊಳಿಸು

## ಫ

ಫರಂಗ್ಯಾರು - ಪರಂಗಿಯವರು, ಬ್ರಿಟಿಷರು

ಫೈಲ್ - ಕಡತ

## ಬ

ಬಂಡತನ - ನಾಚಿಕೆಯಿಲ್ಲದ ವರ್ತನೆ

ಬಜೆಟ್ - ಆದಾಯ ವೆಚ್ಚಗಳ ಅಂದಾಜುಪಟ್ಟಿ

ಬಯಲಾಗು - ಪ್ರಕಟವಾಗು, ಬಹಿರಂಗವಾಗು, ಕಾಣದಾಗು

ಬವಣೆ - ತೊಂದರೆ, ಕಷ್ಟ

ಬಸುರು - ಹೊಟ್ಟೆ

ಬಾಧ್ಯಸ್ಥ - ಹೊಣೆಗಾರ, ಹಕ್ಕುದಾರ

ಬಾಬತ್ತು - ವಿಷಯ, ಸಂಗತಿ

ಬಿಂಬ - ಪ್ರತಿರೂಪ, ವಿಗ್ರಹ, ಪ್ರತಿಮೆ

ಬಿಗಿ - ಬಂಧಿಸು, ಗಟ್ಟಿಯಾಗಿ ಕಟ್ಟು.

ಬಿರಿಸಾಗು - ಕಠಿಣವಾಗು, ಪ್ರಬಲವಾಗು

ಬೀಳು - ಒಂದು ಬಗೆಯ ಬಳ್ಳಿ

ಬುಗ್ಗೆ - ಚಿಲುಮೆ, ಒರತೆ

ಬುವಿ - ಭೂಮಿ

ಬೆಟ್ಟು - ಬೆರಳು

ಬೆಟ್ಟೆ - ಒರಟುತನ, ಬಿರುಸುತನ

ಬೆಟ್ಟೆಮಾಡು - ಬಲಪ್ರಯೋಗಿಸು, ಕಠಿಣವಾಗಿ ವರ್ತಿಸು

ಬೆತ್ಲಹೇಮ - ಯೇಸು ಹುಟ್ಟಿದ ಸ್ಥಳ, ಜೆರುಸಲೇಮಿನ ಒಂದು ಪ್ರದೇಶ

ಬೆಸುಗೆ - ಹೊಂದಿಕೆ, ಬೆಸೆಯುವಿಕೆ

ಬೆಸ್ತ - ಮೀನು ಹಿಡಿಯುವವನು

ಬೇಬಿಫುಡ್ - ಶಿಶು ಆಹಾರ

ಬೇಡಿ - ಕೋಳ

ಬೋಗನ್‌ವಿಲ್ಲಾ ಹೂ - ಒಂದು ಬಗೆಯ ಹೂ (ಕಾಗದದ ಹೂ)

## ಭ

ಭಂಗ - ಸೋಲು, ಅಪಮಾನ, ಕುಂದು

ಭಂಟ - ಸೇವಕ

ಭಂಡತನ - ನಾಚಿಕೆಯಿಲ್ಲದ ವರ್ತನೆ, ಬಂಡತನ

ಭತ್ಯ - ವಿಶೇಷವಾದ ಸಂಭಾವನೆ

ಭಾಮಿನಿ - ಹೆಣ್ಣು, ಸ್ತ್ರೀ

ಭಾಷಿಣಿ - ಮಾತನಾಡುವವಳು

ಭೂಚಂದ್ರಾರ್ಕತಾರಾಂಬರಂ - ಭೂಮಿ, ಚಂದ್ರ, ಸೂರ್ಯ ನಕ್ಷತ್ರ ಆಕಾಶಗಳಿರುವ ತನಕ
ಭೂನಾಥ - ಭೂಮಿಯ ಒಡೆಯ, ರಾಜ
ಭೂರಿ - ಹೆಚ್ಚು, ಅಧಿಕ
ಭೂಷಣೆ - ಅಲಂಕಾರ ಮಾಡಿದವಳು
ಭೇದ - ವ್ಯತ್ಯಾಸ, ಪಕ್ಷಪಾತ
ಭೌತಿಕಶಾಸ್ತ್ರ - ಪ್ರಕೃತಿಯ ಶಕ್ತಿಯನ್ನು ಪ್ರತಿಪಾದಿಸುವ ಶಾಸ್ತ್ರ

## ಮ

ಮಂಕು - ಜಡತೆ, ಮಸುಕು
ಮಂತ್ರ - ವೇದಗಳಲ್ಲಿರುವ ಪವಿತ್ರವಾದ ದೇವತಾ ಸ್ತುತಿ,
ಮಂದಸ್ಮಿತೆ - ಮೆಲುನಗೆಯವಳು
ಮಂದಾನಿಲ - ಮಂದವಾದ ಗಾಳಿ, ಮೆಲುಗಾಳಿ
ಮಗ್ಗುಲು - ಪಕ್ಕ
ಮತ್ತ - ಮತ್ತೆ
ಮನೋಜ್ಞ - ಸುಂದರವಾದ, ಚೆಲುವಾದ
ಮಡದಿ - ಹೆಂಡತಿ, ಹೆಂಗಸು
ಮಮ - ನನ್ನ
ಮರುತ - ಗಾಳಿ
ಮಲೆತ - ಸೊಕ್ಕಿದ, ಕೊಬ್ಬಿದ
ಮಹಲು - ಅಂತಸ್ತಿನ ಮನೆ, ಉಪ್ಪರಿಗೆಯ ಮನೆ
ಮಾಡಒಲ್ಲ - ಮಾಡಲು ಬಿಡುವುದಿಲ್ಲ
ಮಾತೃಕೆ - ತಾಯಿ, ಜನನಿ, ಮೂಲ
ಮಾನವತೆ - ಮಾನವೀಯತೆ, ಮನುಷ್ಯತ್ವ
ಮಾರಿ - ಮುಖ
ಮಿಸಲೇನಿಯಸ್ - ಇತರ ಖರ್ಚು
ಮಿಸುನಿ - ಬಂಗಾರ
ಮಿಗೆ - ಚೆನ್ನಾಗಿ, ಹೆಚ್ಚಾಗಿ, ಅಧಿಕವಾಗಿ
ಮಿಡಿಯು - ಕಣ್ಣೀರನ್ನು ಬೆರಳಿನಿಂದ ಒರೆಸು, ಚಿಟಿಕೆ ಹಾಕು, ಸ್ಪಂದಿಸು
ಮಿನಾರು - ಎತ್ತರದ ಸ್ತಂಭ
ಮುಂಚೂಣಿ - ಮುಂಭಾಗ
ಮುಕ್ಕೋಟಿ - ಮೂರುಕೋಟಿ
ಮುಗುಳು - ಮೊಗ್ಗೆ
ಮುಗುಳಂಬ - ಮುಗುಳುಗಳೇ ಬಾಣಗಳಾಗಿ ಉಳ್ಳವ- ಮನ್ಮಥ
ಮುಟ್ಠಾಳ - ಮೂರ್ಖ
ಮುಡಿ - ತಲೆ
ಮುತ್ತುವಂತೆ - ಸುತ್ತುವರಿಯುವಂತೆ
ಮೃದು - ಶಾಂತ, ಲಲಿತ
ಮೃತ್ಯು - ಸಾವು
ಮೇಧಾವಿ - ಪಂಡಿತ, ಬುದ್ಧಿವಂತ
ಮೈಯತ್ತು - ಶವ
ಮೊಗ - ಮುಖ, ಮೋರೆ, ವದನ
ಮೊಡಕು - ಮೂಲೆ, ಬಾಗಿರುವುದು, ತಿರುವು, ಇಕ್ಕಟ್ಟಾದ ಸ್ಥಳ

ಮೊರ - ಗೆರಸೆ

ಮೊಹರು - ಸೀಲು, ಮುದ್ರೆ

ಮೊಳೆ - ಆಣಿ

ಮೋನದೊಳು - ಮೌನದಲ್ಲಿ

ಮೋಹರ - ಗುಂಪು

ಮೋಹರಂಬೆತ್ತು - ಗುಂಪುಕೂಡಿ

ಮೋಹಿಸು - ಮರುಳಾಗು, ಬೆರಗುಗೊಳ್ಳು

ಮೋಹು - ಗುರಿಯಿಡು, ಮುಟ್ಟು

ಮೌಢ್ಯ - ಮೂಢತನ, ದಡ್ಡತನ

ಮೌಲ್ಯ - ಬೆಲೆ

ಮಾಸು - ಮಸುಕಾಗು, ಬಣ್ಣಗೆಡು

## ಯ

ಯಕ್ಷಿ - ಮಾಟಗಾತಿ, ಜಕ್ಕಿಣಿ

## ರ

ರಗಳೆ - ಹಾಳುಹರಟೆ, ತಿರುಳಿಲ್ಲದ ಮಾತು

ರಾಗ - ಸಂತೋಷ

ರಾದ್ಧಾಂತ - ವಾದ, ವಿವಾದಗಳ ನಿರ್ಣಯ

ರಿಪು - ಶತ್ರು

ರುಜೆ - ರೋಗ

ರುಸಿ - ಋಷಿ

ರೇಗು - ಕೋಪಗೊಳ್ಳು, ಕೆರಳು

ರೊಚ್ಚಿಗೇಳು - ಸಿಟ್ಟಿಗೇಳು

ರೋಜಾ - ವ್ರತ

## ಲ

ಲಾಲಸೆ - ಅತ್ಯಾಸೆ, ಆಸಕ್ತಿ

ಲೀಲೆ - ವಿನೋದ, ಕ್ರೀಡೆ, ವಿಲಾಸ, ಸೌಂದರ್ಯ

ಲೇಸು - ಒಳ್ಳೆಯದು

## ವ

ವಜ್ರದೇಹಿ - ವಜ್ರದಂತೆ ಗಟ್ಟಿಯಾದ ಶರೀರವುಳ್ಳವ

ವಾರಿಧಿ - ಸಮುದ್ರ

ವಾಸ್ತವ - ಸ್ವಾಭಾವಿಕ, ಸಹಜವಾದ

ವಿನೋದ - ಆನಂದ, ಪರಿಹಾಸ್ಯ

ವಿಮುಕ್ತಿ - ಬಿಡುಗಡೆ, ಮೋಕ್ಷ

ವಿಸ್ಮಯ - ಬೆರಗು, ಸೋಜಿಗ

ವಿಸ್ತಾರ - ವೈಶಾಲ್ಯ, ಬೆಳೆಯುವಿಕೆ

ವೈಶಾಲ್ಯ - ವಿಶಾಲತೆ, ವಿಸ್ತಾರ

ವ್ಯಾಕುಲ - ಚಿಂತೆ, ದುಃಖ, ಕಳವಳ

ವ್ಯಾನಿಟಿ ಬ್ಯಾಗ್ - ಒಯ್ಯಾರ ಚೀಲ, ಮಹಿಳೆಯರು ಭುಜದಲ್ಲಿ ತೂಗಾಡಿಸಿಕೊಳ್ಳುವ ಚೀಲ

## ಶ

ಶಂಕೆ - ಸಂದೇಹ, ಸಂಶಯ

ಶಮ - ಆತ್ಮಸಂಯಮನ, ಶಾಂತಿ, ಮನೋನಿಗ್ರಹ

ಶಯನ - ಮಲಗುವಿಕೆ

ಶರಣಹೋಗು - ಆಶ್ರಯಪಡೆ, ರಕ್ಷಣೆ ಹೊಂದು

ಶ್ಯಾಮಲೆ - ಹಸಿರು ಬಣ್ಣದವಳು

ಶ್ಲಾಘನೆ - ಹೊಗಳಿಕೆ

ಶಿಖಿ - ಅಗ್ನಿ

ಶಿಫಾರಸ್ಸು - ವಶೀಲಿ, ಅರ್ಹವಾಗಿದೆಯೆಂದು ಸೂಚಿಸುವುದು

ಶಿರೋಮಣಿ - ಶ್ರೇಷ್ಠನಾದವರು, ಚೂಡಾಮಣಿ

ಶುಶ್ರೂಷೆ - ಉಪಚಾರ, ಸೇವೆ

ಶ್ಯೂಜೆ - ಶಿಲುಬೆ

ಶೃಂಖಲೆ - ಬಂಧನ, ಸಂಕೋಲೆ

ಶ್ರಮಿಕ - ಶ್ರಮಗಾರ, ಶ್ರಮವಹಿಸಿ ದುಡಿಯುವವ

ಶ್ವಪಚ - ಅಸ್ಪೃಶ್ಯ

**ಸ**

ಸಂದಿ - ಎಡೆ, ಸ್ಥಳ

ಸಂವೇದನೆ - ಜ್ಞಾನ, ಅನುಭವ, ಅರಿವು, ತಿಳುವಳಿಕೆ

ಸಟೆ - ಮೋಸ, ಸುಳ್ಳು

ಸಡಿಲದೆ - ಬಿಗುವಿಲ್ಲದೆ, ಶಿಥಿಲವಾಗದೆ

ಸಣ್ಣಂಗ - ಸಣ್ಣದಾಗಿ, ಮಿದುವಾಗಿ

ಸತ್ವ - ಸಾರ

ಸರೀಕ - ಸಮಾನ

ಸ್ತಂಭೀಭೂತ - ದಿಗ್ಭ್ರಮೆಗೊಂಡ, ಅಚ್ಚರಿಯಿಂದ ಕಂಬದಂತೆ ನಿಂತ

ಸನೀಯ - ಸಮೀಪ

ಸಪ್ತ - ಏಳು

ಸಪ್ಪರ್ - ರಾತ್ರಿಯ ಊಟ

ಸಮತೆ - ಸಮಾನತೆಯ ಭಾವನೆ, ನಿಷ್ಪಕ್ಷಪಾತ

ಸರದ - ಸಂದು

ಸರಪಣಿ - ಗೊಣಸುಗಳಿಂದ ಕೂಡಿದ ಸಂಕೋಲೆ

ಸರಸಿ - ಕೊಳ, ಸರೋವರ

ಸರಿತ - ನೀರ, ನೀಳ

ಸರಿಯಂಗ - ಸರಿಯಾಗಿ

ಸ್ವರ್ಣಗರ್ಭೆ - ಗರ್ಭದಲ್ಲಿ ಚಿನ್ನವನ್ನು ಹೊಂದಿದುದು, ಭೂಮಿ

ಸಹರ್ - ಬೆಳಗ್ಗಿನ ಪ್ರಾರ್ಥನೆ

ಸಾಂದ್ರ - ನಿಬಿಡ, ಎಡೆಬಿಡದ

ಸಾಟಿ - ಸಮಾನ, ಹೋಲುವಂತಹ

ಸ್ವಾಹ - ಸೇವಿಸು

ಸಿಂಧು - ಸಮುದ್ರ

ಸಿಡ್ಲ - ಸಿಡಿಲು

ಸಿಬ್ಬಂದಿ - ನೌಕರ

ಸೀಗುರಿಸು - ಸುಡು, ದಹಿಸು, ಸುಟ್ಟುಹೋಗು, ಬೇಗುದಿಗೊಳ್ಳು, ಹಬ್ಬು, ವ್ಯಾಪಿಸು

ಸುಪ್ತ - ಗುಪ್ತ, ಅಡಗಿರುವ, ನಿದ್ರಿಸಿದ

ಸುಲಿಗೆ - ಲೂಟಿ, ದರೋಡೆ

ಸ್ಫುರಣ - ಕಂಪನ, ಹೊಳೆಯುವುದು

ಸೂರೆ - ಕೊಳ್ಳೆ, ಲೂಟಿ

ಸ್ಥೂಲಕಾಯ - ದೊಡ್ಡದಾದ ದೇಹವುಳ್ಳವ

ಸೆಕ್ಯೂಲರ್ - ಜಾತ್ಯತೀತ

ಸೆಣಸು - ಹೋರಾಡು, ಕಾದಾಡು

ಸೆಲೆ - ನೀರಿನ ಸಂತತಧಾರೆ, ಬುಗ್ಗೆ, ಒಸರು

ಸೊರಗು - ಕೊರಗು, ಮರುಗು, ಬಡಕಲಾಗು, ಚಿಂತೆಪಡು

ಸೊಂಟಮಟ – ಸೊಂಟದ ತನಕ

## ಹ

ಹಗರಣ - ಪ್ರಕರಣ

ಹಗೆ - ದ್ವೇಷಿಸು, ವೈರ

ಹಡಿಯು - ಹೆರು

ಹದನ - (ಸರಿಯಾದ) ಸಮಯ, ಕಾಲ, ರೀತಿ, ಕ್ರಮ, ಹರಿತ, ಚೂಪು

ಹಸ್ತಾಂತರ – ವರ್ಗಾವಣೆ

ಹೆಮ್ಮುಗೆ - ಗರ್ವ, ಪಾಶ, ಕಟ್ಟು, ಯೋಜನೆ, ಬಂಧನ

ಹವಾಲ್ದಾರ - ಸೈನ್ಯದ ಒಬ್ಬ ಅಧಿಕಾರಿ

ಹಾತೊರೆ - ಆತುರಪಡು

ಹಾಯಿ - ಗಾಳಿಯ ಅನುಕೂಲತೆಗಾಗಿ ದೋಣಿಯ ನಡುಗಂಬಕ್ಕೆ ಕಟ್ಟುವ ನೌಕಾಪಟ

ಹಿಂದಡ - ಹಿಂದಿನ ದಿಣ್ಣೆ

ಹಿಮ್ಮೆಟ್ಟು - ಹೆದರಿ ಹಿಂದಕ್ಕೆ ಸರಿ, ಹಿಂಜರಿ

ಹುಕುಂ - ಆಜ್ಞೆ

ಹುತಾತ್ಮ - ಮಹತ್ಕಾರ್ಯಕ್ಕಾಗಿ ಪ್ರಾಣ ತ್ಯಾಗ ಮಾಡಿದವರು

ಹುದ್ದೆ - ನೌಕರಿ, ಕೆಲಸ

ಹುಲ್ಲುಬಾಗಿ - ಗೋದಲಿ, ಹಟ್ಟಿಯಲ್ಲಿ ಹುಲ್ಲುಹಾಕುವ ಎತ್ತರದ ಜಾಗ

ಹೆಂದು - ಕುಗ್ಗು, ಹಿಂಜರಿ

ಹೆಡಗಯ್ಯ ನೇಣು - ಬೆನ್ನ ಹಿಂದಕ್ಕೆ ಕಟ್ಟಿದ ಕೈಗಳ ಹಗ್ಗ

ಹೆಡತಲೆ - ತಲೆಯ ಹಿಂಭಾಗ

ಹೆಣಗು - ಯತ್ನಿಸು

ಹೇರಳ - ಧಾರಾಳ

ಹೇವರಿಸು - ಹಿಂಜರಿ, ಹೇಸು

ಹೊಯ್ - ಹೊಡೆ, ಬಡಿ

ಹೋಮಾಗ್ನಿ - ಹೋಮದ ಬೆಂಕಿ

ಹೋರಿಸು - ಯುದ್ಧ ಮಾಡಿಸು, ಹೋರಾಡಿಸು

ಹೋಲು - ಒಂದರಂತೆ ತೋರು, ಸದೃಶವಾಗಿರು.

# ಟಿಪ್ಪಣಿ

# ಟಿಪ್ಪಣಿ